ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಆಗಸ್ಟ್ 05, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 83 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999



## ಕಾಳಿಕಾಂಬ ದೇವಸ್ಥಾನದಲ್ಲಿ ಅಧಿಕ ಶ್ರಾವಣ ಮಾಸದ ವಿಶೇಷ ಪೂಜೆ

ದಾವಣಗೆರೆ, ಆ. 4 - ನಗರದ ಶ್ರೀ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾಂಬ ವಿಶ್ವಕರ್ಮ ದೇವಸ್ಥಾನದಲ್ಲಿ ಅಧಿಕ ಶ್ರಾವಣ ಪುರುಷೋತ್ತಮ ಮಾಸದ ಪ್ರಯುಕ್ತ ದುರ್ಗಾ ದೀಪಾರಾಧನೆ, ದೇವಿಗೆ 33 ವಿಧದ ನೈವೇದ್ಯ, ಭಕ್ಷ್ಯ, ಫಲಪುಷ್ಪ, ಧನಧಾನ್ಯ, ಸಿಹಿಖಾದ್ಯ ಪದಾರ್ಥಗಳೊಂದಿಗೆ ಅಮ್ಮನವರಿಗೆ ಇಂದು ವಿಶೇಷ ಪೂಜೆ ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ಕಾಳಿಕಾದೇವಿ ಭಜನಾ ಮಂಡಳಿಯವರಿಂದ ವಿಷ್ಣು ಸಹಸ್ರನಾಮ, ಲಲಿತಾ ಸಹಸ್ರನಾಮ ಪಾರಾಯಣ ನಡೆಸಲಾಯಿತು.

ಈ ಸಂದರ್ಭದಲ್ಲಿ ಶ್ರೀಮತಿ ಉಮಾ ನಾಗರಾಜ್, ಶ್ರೀಮತಿ ಶ್ರೀದೇವಿ ಅಮರಾವತಿ, ಶ್ರೀಮತಿ ಅಗಡಿ ಶಶಿಕಲಾ, ಶ್ರೀಮತಿ ಸರಸ್ವತಿ ವಸಂತಕುಮಾರ್ ಸೇರಿದಂತೆ ಭಜನಾ ಮಂಡಳಿಯ ಇತರೆ ಮಹಿಳೆಯರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದೇವಸ್ಥಾನದ ಅರ್ಚಕರಾದ ಬ್ರಹ್ಮಶ್ರೀ ಟೀಕಾಚಾರ್ ಅವರು ವಿಶೇಷ ಪೂಜೆ ಕಾರ್ಯಗಳನ್ನು ನೆರವೇರಿಸಿದರು. ದೇವಸ್ಥಾನ ಟ್ರಸ್ಟ್ ಕಮಿಟಿಯ ಪದಾಧಿಕಾರಿಗಳು ಮತ್ತು ಭಕ್ತಾದಿಗಳು ಪಾಲ್ಗೊಂಡಿದ್ದರು.

# ಒತ್ತುವರಿ ತೆರವಿಗೆ ಅಭಿಯಾನ

## ಅಧಿಕಾರಿಗಳಿಗೆ ಗಡುವು ನಿಗದಿ: ಕಂದಾಯ ಸಚಿವ ಕೃಷ್ಣಬೈರೇಗೌಡ

ಬೆಂಗಳೂರು, ಆ.4 - ರಾಜ್ಯಾದ್ಯಂತ ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಗಡುವು ನಿಗದಿ ಮಾಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಲಸುಬ್ರಮಣ್ಯಂ, ಎ.ಟಿ.ರಾಮಸ್ವಾಮಿ ಹಾಗೂ ನಮ್ಮಲ್ಲಿರುವ ದಾಖಲೆಗಳನ್ನು ಮುಂದಿಟ್ಟುಕೊಂಡು ಒತ್ತುವರಿ ತೆರವುಗೊಳಿಸಲಾಗುವುದು ಎಂದರು.

ಯಾರು ಎಷ್ಟೇ ಪ್ರಭಾವಿಗಳು ಒತ್ತುವರಿ ಮಾಡಿದ್ದರೂ ಅವುಗಳನ್ನು ತೆರವುಗೊಳಿಸಿ ಸಂರಕ್ಷಣೆ ಮಾಡುವ ಅಧಿಕಾರವನ್ನು ರೆವಿನ್ಯೂ ಇನ್ಸಪೆಕ್ಟರ್‌ಗಳಿಗೆ ನೀಡಲಾಗುವುದು.

ಈಗಾಗಲೇ ನಾವು ರಾಜ್ಯಾದ್ಯಂತ ಪ್ರವಾಸ ಕೈಗೊಂಡು, ವಿಭಾಗ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಸಭೆ ನಡೆಸಿ ಒತ್ತುವರಿ ತೆರವಿಗೆ ಸಲಹೆ ಸೂಚನೆ ಹಾಗೂ ಗಡುವು ನೀಡಲಾಗಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲೇ ಅತಿ ಹೆಚ್ಚು ಭೂಮಿ ಒತ್ತುವರಿಯಾಗಿದ್ದು, ಬಲಾಢ್ಯರು ಇದ್ದಾರೆ. ಇದನ್ನು ತೆರವುಗೊಳಿಸಲು ಆ.7 ರ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಿ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗುತ್ತದೆ ಎಂದರು.

ಈ ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾದ ಭೂಮಿಯ ಕುರಿತು ಮಾಹಿತಿ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಈ ಮಾಹಿತಿ ಬಂದ ನಂತರ ಎಷ್ಟು ಮಂಜೂರಾತಿ ಪ್ರಕರಣಗಳು ಕ್ರಮಬದ್ಧವಾಗಿವೆ. ಎಷ್ಟು ಕ್ರಮಬದ್ಧವಾಗಿಲ್ಲ ಎಂಬುದನ್ನು ಪರಿಶೀಲನೆ ಮಾಡುತ್ತೇವೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಮಂಜೂರಾತಿ ಪ್ರಕ್ರಿಯೆ ಕ್ರಮಬದ್ಧವಾಗಿದ್ದರೆ ಅದಕ್ಕೆ ತಡೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಈ ಹಿಂದಿನ ಆರು ತಿಂಗಳ ಅವಧಿಯ ಮಂಜೂರಾತಿಯನ್ನು ಮಾತ್ರ ಪರಿಗಣಿಸಲಾಗುವುದು ಎಂದು ವಿವರಿಸಿದರು.

ರಾಜ್ಯಾದ್ಯಂತ ಬಗರ್ ಹುಕುಂ ಸಮಿತಿಗಳನ್ನು ರಚಿಸಲು ನಿರ್ಧರಿಸಲಾಗಿದೆ ಎಂದರು.

ರಾಜ್ಯದಲ್ಲಿ ಖಾಲಿ ಇರುವ ತಹಸೀಲ್ದಾರ್ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳುವುದಾಗಿ ನುಡಿದ ಅವರು, ಎಲ್ಲೆಲ್ಲಿ ಈ ಹುದ್ದೆಗಳು ಖಾಲಿ ಇವೆ ಎಂಬುದರ ವಿವರ ಪಡೆದು ನಂತರ ಅದನ್ನು ಭರ್ತಿ ಮಾಡಲಾಗುವುದು ಎಂದು ಹೇಳಿದರು.

### ದಾವಣಗೆರೆಯಲ್ಲಿ 13,379 ಎಕರೆ ಒತ್ತುವರಿ

#### ರಾಜ್ಯದಲ್ಲಿ 14.62 ಲಕ್ಷ ಎಕರೆ ಭೂಮಿ ಒತ್ತುವರಿ

ಬೆಂಗಳೂರು, ಆ.4 - ರಾಜ್ಯಾದ್ಯಂತ 14.62 ಲಕ್ಷ ಎಕರೆ ಭೂಮಿ ಒತ್ತುವರಿಯಾಗಿದೆ. ಇದರ ಬೆಲೆ ಲಕ್ಷಾಂತರ ಕೋಟಿ ರೂ. ಆಗಲಿದೆ.

ಇದನ್ನು ತೆರವುಗೊಳಿಸಲು ಕಂದಾಯ ಇಲಾಖೆ ಕಠಿಣ ನಿರ್ಧಾರ ಕೈಗೊಳ್ಳಲು ಮುಂದಾಗಿದ್ದು, ಕಾರ್ಯಾಚರಣೆ ಆರಂಭಿಸಲಿದೆ.

ಬಾಲಸುಬ್ರಮಣ್ಯ, ಎ.ಟಿ.ರಾಮಸ್ವಾಮಿ ಹಾಗೂ ಇತರೆ ಸರ್ಕಾರಿ ವರದಿಗಳನ್ನು ಆಧಾರದ ಮೇಲೆ ಇಷ್ಟು ದೊಡ್ಡ ಪ್ರಮಾಣದ ಒತ್ತುವರಿಯಾಗಿರುವುದು ಪತ್ತೆಯಾಗಿದೆ.

ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆಯಲ್ಲೇ ಹೆಚ್ಚು ಬಲಾಢ್ಯರು ಒತ್ತುವರಿ ಮಾಡಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲೂ ಬೆಲೆ ಬಾಳುವ ಭೂಮಿ ಒತ್ತುವರಿಯಾಗಿದೆ. ಮೈಸೂರು ಜಿಲ್ಲೆಯಲ್ಲಿ 42,621 ಎಕರೆ, ಚಾಮರಾಜನಗರದಲ್ಲಿ 11,355 ಎಕರೆ, ಕೊಡಗಿನಲ್ಲಿ 42,887 ಎಕರೆ, ಮಂಡ್ಯದಲ್ಲಿ 33,547, ಹಾಸನದಲ್ಲಿ 74,737 ಎಕರೆ, ದಾವಣಗೆರೆ 13,379 ಎಕರೆ ಒತ್ತುವರಿಯಾಗಿದೆ.

## ಐಐಎಂ ಮಸೂದೆಗೆ ಲೋಕಸಭೆ ಒಪ್ಪಿಗೆ

ನವದೆಹಲಿ ಆ. 4 - ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ತಿದ್ದುಪಡಿ) ಮಸೂದೆಗೆ ಲೋಕಸಭೆ ಒಪ್ಪಿಗೆ ನೀಡಿದೆ. ಈ ಮಸೂದೆಯ ಮೂಲಕ ಸಂಸ್ಥೆಗಳನ್ನು ರಾಷ್ಟ್ರಪತಿಗೆ ಉತ್ತರದಾಯಿ ಮಾಡಲಾಗುವುದು.

ಜುಲೈ 28ರಂದು ಮಸೂದೆ ಮಂಡಿಸಲಾಗಿತ್ತು. ಈ ಕುರಿತ ಚರ್ಚೆಯಲ್ಲಿ ಮಾತನಾಡಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಐ.ಐ.ಎಂ.ಗಳ ಸ್ವಾಯತ್ತತೆಯಲ್ಲಿ ಮಧ್ಯ ಪ್ರವೇಶಿಸುವ ಉದ್ದೇಶ ಸರ್ಕಾರಕ್ಕಿಲ್ಲ ಎಂದರು. ಸಂಸ್ಥೆಗಳ ನಿರ್ವಹಣಾ ಹೊಣೆಗಾರಿಕೆಯನ್ನು ರಾಷ್ಟ್ರಪತಿಗೆ ನೀಡಲಾಗಿದೆ. ಶೈಕ್ಷಣಿಕ ಹೊಣೆಗಾರಿಕೆಯೂ (4ನೇ ಪುಟಕ್ಕೆ)

## 3ನೇ ಎರಡರಷ್ಟು ಹಾದಿ ಕ್ರಮಿಸಿದ ಚಂದ್ರಯಾನ

ಬೆಂಗಳೂರು, ಆ. 4 - ಮೂರನೇ ಚಂದ್ರಯಾನವು ತನ್ನ ಮೂರನೇ ಎರಡರಷ್ಟು ಹಾದಿಯನ್ನು ಕ್ರಮಿಸಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ತಿಳಿಸಿದೆ.

ಜುಲೈ 14ರಂದು ಉಡಾವಣೆಗೊಂಡಿದ್ದ ಚಂದ್ರಯಾನದ ಕಕ್ಷೆಯನ್ನು ಐದು ಬಾರಿ ಏರಿಸಲಾಗಿತ್ತು. ಆಗಸ್ಟ್ 1ರಂದು ಕವಣೆ ರೀತಿಯ ಪ್ರಕ್ರಿಯೆ ಮೂಲಕ ಚಂದ್ರಯಾನವನ್ನು ಭೂಮಿಯ ಕಕ್ಷೆಯಿಂದ ಬೇರ್ಪಡಿಸಿ ಚಂದ್ರನ ಕಡೆ ರವಾನಿಸಲಾಗಿತ್ತು.

ನಾಳೆ ಶನಿವಾರ ಸಂಜೆ 7 (4ನೇ ಪುಟಕ್ಕೆ)

## ಚುನಾವಣಾ ಸ್ಪರ್ಧೆ ವಯಸ್ಸು ಇಳಿಸಲು ಸಮಿತಿ ಶಿಫಾರಸ್ಸು

ನವದೆಹಲಿ, ಆ. 4 - ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ವಯಸ್ಸನ್ನು ಈಗಿರುವ 25ರಿಂದ 18ಕ್ಕೆ ಇಳಿಸುವಂತೆ ಸಂಸದೀಯ ಸಮಿತಿಯೊಂದು ಶಿಫಾರಸ್ಸು ಮಾಡಿದೆ. ಯುವಕರು ಪ್ರಜಾಪ್ರಭುತ್ವದಲ್ಲಿ ಪಾಲ್ಗೊಳ್ಳಲು ಸಮಾನ ಅವಕಾಶ ನೀಡುವ ಸಲುವಾಗಿ ಈ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ ಎಂದು ತಿಳಿಸಲಾಗಿದೆ.

ಪ್ರಸಕ್ತ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗೆ ಸ್ಪರ್ಧಿಸಲು ಕನಿಷ್ಠ 25 ವರ್ಷ ವಯಸ್ಸಾಗಿರಬೇಕು. ರಾಜ್ಯಸಭೆ ಹಾಗೂ ರಾಜ್ಯ ಪರಿಷತ್‌ಗಳಿಗೆ ಸ್ಪರ್ಧಿಸಲು 30 ವರ್ಷ ಆಗಿರಬೇಕಿದೆ.

ಕೆನಡಾ, ಬ್ರಿಟನ್, ಆಸ್ಟ್ರೇಲಿಯ ಮುಂತಾದ ದೇಶಗಳ ಅಧ್ಯಯನ ಮಾಡಿದ ನಂತರ, ಭಾರತದಲ್ಲಿ ಚುನಾವಣೆಗೆ ಸ್ಪರ್ಧಿಸುವ ವಯಸ್ಸು 18ಕ್ಕೆ ಇಳಿಸಬೇಕು ಎಂದು ಕಾನೂನು ಹಾಗೂ (4ನೇ ಪುಟಕ್ಕೆ)

## ಖರ್ಗೆ ಕುರಿತ ಹೇಳಿಕೆ : ಆರಗ ವಿರುದ್ಧ ಎಫ್‌ಐಆರ್

ಕಲಬುರಗಿ, ಅ. 4 - ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅನುಚಿತ ಹೇಳಿಕೆ ನೀಡಿದ ಬಿಜೆಪಿ ನಾಯಕ ಹಾಗೂ ಮಾಜಿ ಗೃಹ ಸಚಿವ ಆರಗ ಜ್ಞಾನೇಂದ್ರ ವಿರುದ್ಧ ಪೊಲೀಸರು ಎಫ್.ಐ.ಆರ್. ದಾಖಲಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತ ರಾಜೀವ್ ಎಂಬುವವರು ನೀಡಿದ ದೂರಿನ ಆಧಾರದ ಮೇಲೆ ಎಫ್.ಐ.ಆರ್. ದಾಖಲಿಸಲಾಗಿದೆ.

ಖರ್ಗೆ ಹಾಗೂ ಅವರ ತವರು ನೆಲೆಯ ಜನರ ಬಣ್ಣದ ಬಗ್ಗೆ ಜ್ಞಾನೇಂದ್ರ ಅನುಚಿತ ಮಾತನಾಡಿದ್ದರು. ಈ ವಿಷಯ ತೀವ್ರ ವಿವಾದಕ್ಕೆ ಕಾರಣವಾದ ನಂತರ ಅವರು ಹೇಳಿಕೆಗಳ ಬಗ್ಗೆ ವಿಷಾದಿಸಿದ್ದರು.

# ಮೋದಿ ಉಪನಾಮ : ರಾಹುಲ್ ಶಿಕ್ಷೆಗೆ ತಡೆ



**ಶಿಕ್ಷೆಯಿಂದ ರಾಹುಲ್ ಸಾರ್ವಜನಿಕ ಜೀವನ, ಮತದಾರರ ಹಕ್ಕಿನ ಮೇಲೆ ಪರಿಣಾಮವಾಗಿದೆ ಎಂದ ಸುಪ್ರೀಂ ಕೋರ್ಟ್**

ನವದೆಹಲಿ, ಆ. 4 - ಮೋದಿ ಉಪನಾಮ ಕುರಿತು ನೀಡಿದ ಹೇಳಿಕೆಗಳಿಗಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ವಿಧಿಸಲಾಗಿದ್ದ ಎರಡು ವರ್ಷಗಳ ಜೈಲು ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಇದರಿಂದಾಗಿ ರಾಹುಲ್ ಗಾಂಧಿ ಮತ್ತೆ ಸಂಸದರಾಗುವ ಹಾದಿ ತೆರವಾಗಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಎಸ್. ನರಸಿಂಹ ಹಾಗೂ ಸಂಜಯ್ ಕುಮಾರ್ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದ್ದು, ಸುಪ್ರೀಂ ಕೋರ್ಟ್ ರಾಹುಲ್ ಗಾಂಧಿಗೆ ಈ ಹಿಂದೆ ತಾಕೀತು ಮಾಡಿದ್ದನ್ನು ಬಿಟ್ಟರೆ, ಶಿಕ್ಷೆ ವಿಧಿಸಲು ವಿಚಾರಣಾ ನ್ಯಾಯಾಲಯ ಯಾವುದೇ ಕಾರಣ ನೀಡಿಲ್ಲ ಎಂದು ಹೇಳಿದೆ.

ರಫೇಲ್ ಪ್ರಕರಣದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು 'ಕಳ್ಳ' ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದರು. ಸುಪ್ರೀಂ ಕೋರ್ಟ್ ಆಡದೇ ಇರುವ ಮಾತನ್ನು ಹೇಳಿದ್ದಕ್ಕಾಗಿ ರಾಹುಲ್‌ಗೆ ನ್ಯಾಯಾಲಯ ತರಾಟೆಗೆ ತೆಗೆದುಕೊಂಡಿತ್ತು. ರಾಹುಲ್ ಗಾಂಧಿ ಈ ಬಗ್ಗೆ ಬೇಷರತ್ ಕ್ಷಮೆ ಯಾಚಿಸಿದ ನಂತರ, ಮುಂದಿನ ದಿನಗಳಲ್ಲಿ ಎಚ್ಚರವಾಗಿರುವಂತೆ ನ್ಯಾಯಾಲಯ ಹೇಳಿತ್ತು.

ರಾಹುಲ್ ಗಾಂಧಿಗೆ ವಿಧಿಸಿದ ಶಿಕ್ಷೆ ಹಾಗೂ ಲೋಕಸಭಾ ಸ್ಥಾನದ ಅನರ್ಹತೆಯಿಂದಾಗಿ ಅವರು ಸಾರ್ವಜನಿಕ ಜೀವನದಲ್ಲಿ ಮುಂದುವರೆಯುವ ಹಕ್ಕಿನ ಮೇಲೆ ಪರಿಣಾಮವಾಗಿದೆ. ಅಷ್ಟೇ ಅಲ್ಲದೇ, ಅವರನ್ನು ಕ್ಷೇತ್ರದಿಂದ ಚುನಾಯಿಸಿದ ಮತದಾರರ ಹಕ್ಕಿನ ಮೇಲೂ ಪರಿಣಾಮವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ವಿಚಾರಣಾ ನ್ಯಾಯಾಲಯವು ಗರಿಷ್ಠ ಶಿಕ್ಷೆ ವಿಧಿಸಲು ಯಾವುದೇ (4ನೇ ಪುಟಕ್ಕೆ)

### ಲೋಕಸಭಾ ಕಾರ್ಯಾಲಯಕ್ಕೆ ಆದೇಶದ ಪ್ರತಿ ಸಲ್ಲಿಸಿದ ನಂತರ ರಾಹುಲ್ ಅನರ್ಹತೆಗೆ ತಡೆ

ನವದೆಹಲಿ, ಆ. 4 - ಅನರ್ಹತೆಗೆ ಕಾರಣವಾದ ಶಿಕ್ಷೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿರುವ ಆದೇಶವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇಲ್ಲವೇ ಅವರ ಪ್ರತಿನಿಧಿಗಳು ಲೋಕಸಭಾ ಕಾರ್ಯಾಲಯಕ್ಕೆ ಸಲ್ಲಿಸಿದ ನಂತರ ಅವರ ಅನರ್ಹತೆಯ ಪ್ರಕ್ರಿಯೆ ತಡೆಯಲಾಗುವುದು.

ಕಾರ್ಯಾಲಯಕ್ಕೆ ಆದೇಶದ ಪ್ರತಿ ದೊರೆತ ನಂತರ ಅನರ್ಹತೆ ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ಹೇಳಿದ್ದಾರೆ. ಶುಕ್ರವಾರದಂದು ಸುಪ್ರೀಂ ಕೋರ್ಟ್ ರಾಹುಲ್‌ಗೆ ವಿಧಿಸಲಾದ ಶಿಕ್ಷೆಗೆ ತಡೆಯಾಜ್ಞೆ ಹೊರಡಿಸಿತ್ತು.

ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಅವರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ, ರಾಹುಲ್ ಗಾಂಧಿ ಸದಸ್ಯತ್ವವನ್ನು ಆದಷ್ಟು ಶೀಘ್ರ ನೆಲೆಗೊಳಿಸುವಂತೆ ಮನವಿ ಮಾಡಿಕೊಂಡಿದ್ದರು.

# ರಕ್ಷಣಾ ಲೋಪ ಅಳವಡಿಕೆ ತಡೆಯಲು ನಿರ್ಬಂಧ


**ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಕಂಪ್ಯೂಟರ್ ಆಮದು ನಿರ್ಬಂಧಕ್ಕೆ ಸ್ಪಷ್ಟನೆ**

ನವದೆಹಲಿ, ಆ. 4 - ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಹಾಗೂ ಕಂಪ್ಯೂಟರ್‌ಗಳನ್ನು ರೂಪಿಸುವ ಹಂತದಲ್ಲೇ ರಕ್ಷಣಾ ಲೋಪಗಳನ್ನು ಅಳವಡಿಸುವುದನ್ನು ತಡೆಯಲು ಆಮದಿನ ಮೇಲೆ ನಿರ್ಬಂಧ ಹೇರಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಭಾರತದಲ್ಲಿ ಐ.ಟಿ. ಉಪಕರಣಗಳನ್ನು ಉತ್ಪಾದಿಸಲು ಅಗತ್ಯ ಸಾಮರ್ಥ್ಯ ಇದೆ. ಹೀಗಾಗಿ ಆಮದಿಗಾಗಿ ಅನುಮತಿ ಪಡೆಯಬೇಕು ಎಂಬ ನಿರ್ಬಂಧ ಹೇರುವುದರಿಂದ ದೇಶೀಯ ಲಭ್ಯತೆಯ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ ಎಂದು ಮೂಲಗಳು ಹೇಳಿವೆ. ಭಾರತದಲ್ಲಿ ಅಂತರ್ಜಾಲವು ಮುಕ್ತ, ಸುರಕ್ಷಿತ ಹಾಗೂ ಉತ್ತರದಾಯಿ ಆಗಿರುವಂತೆ ಮಾಡಲು ಸರ್ಕಾರ ಬದ್ಧವಾಗಿದೆ. ಅಂತರ್ಜಾಲದ ಬಳಕೆ ಹೆಚ್ಚಾದಂತೆ ದೇಶದ ನಾಗರಿಕರು ಅಪಾಯಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಸೈಬರ್ ಭದ್ರತೆ ಬೆದರಿಕೆಯ ಹಲವಾರು ಘಟನೆ ಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ.

ಕೆಲ ಹಾರ್ಡ್‌ವೇರ್ ಹಾಗೂ ಫರ್ಮ್‌ವೇರ್ ಗಳಲ್ಲಿ ಅಂತರ್ಗತವಾಗಿ ರಕ್ಷಣಾ ಲೋಪಗಳನ್ನು ಅಳವಡಿಸಲಾಗುತ್ತಿದೆ. ಇದು ವೈಯಕ್ತಿಕ ಹಾಗೂ (4ನೇ ಪುಟಕ್ಕೆ)

## ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ



ಬೆಂಗಳೂರು, ಆ.4- ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಸ್ಮರಣಾರ್ಥ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ ಲಾಲ್‌ಬಾಗ್‌ನಲ್ಲಿ ಇದೇ ದಿನಾಂಕ 4 ರಿಂದ 15 ರವರೆಗೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಚಾಲನೆ ನೀಡಿದರು. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಸಚಿವ ಶಾಮನೂರು ಮಲ್ಲಿಕಾರ್ಜುನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಅನ್ನಭಾಗ್ಯದ ದುರುಪಯೋಗ ವಿರುದ್ಧ ಕ್ರಮ

ಬೆಂಗಳೂರು, ಆ.4- ಅನ್ನಭಾಗ್ಯ ಯೋಜನೆಯನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಉಳ್ಳವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖೆಗಿರುವ ಪ್ರಾಥಮಿಕ ಮಾಹಿತಿ ಆಧಾರದ ಮೇಲೆ ಬಿಪಿಎಲ್ ಪಡಿತರ ಚೀಟಿ ದುರುಪಯೋಗದ ಬಗ್ಗೆ ಸಮಗ್ರ ತನಿಖೆ ನಡೆಸಲಾಗುವುದು ಎಂದರು.

ತನಿಖಾ ವರದಿ ಬರುತ್ತಿದ್ದಂತೆ ಸರ್ಕಾರದ ನಿಯಮಾವಳಿಗೆ ವಿರುದ್ಧವಾಗಿ ಪಡಿತರ ಚೀಟಿ ಪಡೆದಿದ್ದರೆ, ಅಂಥವರಿಗೆ ಶಿಕ್ಷೆ ಕಾದಿದೆ.

ಬಿಪಿಎಲ್ ಪಡಿತರ ಚೀಟಿ ಕೋರಿ ಜುಲೈ ಅಂತ್ಯಕ್ಕೆ 3,18,907 ಅರ್ಜಿಗಳು ಬಾಕಿ ಇವೆ. ಅದರ ಜತೆಗೆ ಪಡಿತರ ಚೀಟಿಯಲ್ಲಿ ತಿದ್ದುಪಡಿ, ಸೇರ್ಪಡೆ, ರದ್ಧತಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗುವುದು. ಇದೇ ವೇಳೆಗೆ ಅರ್ಜಿದಾರರಿಗೆ ಹೊಸ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುವುದು. ಈ ಪ್ರಕ್ರಿಯೆ ಮುಗಿಯುತ್ತಿದ್ದಂತೆ ಉಳ್ಳವರು ಪಡಿತರ ಚೀಟಿ ಹೊಂದಿದ್ದರೆ, ಅಂಥವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು.



ತಿದ್ದುಪಡಿ, ಸೇರ್ಪಡೆ ಮತ್ತು ರದ್ಧತಿಗೆ ಇದೇ ಕಾರಣಕ್ಕೆ ಕಾಲಾವಕಾಶ ನೀಡಿದ್ದೇವೆ. ಆ ಸಮಯದಲ್ಲಿ ಅರ್ಹರಲ್ಲದವರು, ಸ್ವ ಇಚ್ಛೆಯಿಂದ ಪಡಿತರ ಚೀಟಿಗಳನ್ನು ಹಿಂದಿರುಗಿಸಬೇಕು ಎಂದು ಸಲಹೆ ಮಾಡಿದರು.

ಕೇವಲ 25 ದಿನದಲ್ಲೇ ಒಂದು ಕೋಟಿ ಕುಟುಂಬಗಳಿಗೆ 566 ಕೋಟಿ ರೂ.ಗಳನ್ನು ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಲಾಗಿದೆ. ಹೆಚ್ಚುವರಿ 5 ಕೆ.ಜಿ. ಅಕ್ಕಿ ಬದಲು ತಲಾ 170 ರೂಗಳನ್ನು ಮಾಸಿಕವಾಗಿ ನೀಡಲಾಗುತ್ತಿದೆ.

**ತೆಲಂಗಾಣ, ಆಂಧ್ರದಿಂದ ಅಕ್ಕಿ :** ತೆಲಂಗಾಣ ಹಾಗೂ ಆಂಧ್ರಪ್ರದೇಶ (4ನೇ ಪುಟಕ್ಕೆ)

# ಎಲ್ಲಾ ಬಾಡಿಗೆ ಮನೆಗಳಿಗೂ ಸರಾಸರಿ ಲೆಕ್ಕದ ವಿದ್ಯುತ್

## ಹೊಸ ಮತ್ತು ಹಳೆಯ ಬಾಡಿಗೆದಾರರಿಗೆ ಇಲ್ಲ ವ್ಯತ್ಯಾಸ

ದಾವಣಗೆರೆ, ಆ. 4 - ಗೃಹ ಜ್ಯೋತಿ ಯೋಜನೆಯಡಿ ನೀಡಲಾಗುವ ಉಚಿತ ವಿದ್ಯುತ್‌ಗೆ ಸಂಬಂಧಿಸಿದಂತೆ ಬಾಡಿಗೆ ಮನೆಗಳು ಹಾಗೂ ಮಾಲೀಕರ ಕುರಿತ ನಿರ್ಬಂಧಗಳನ್ನು 'ಅಘೋಷಿತ'ವಾಗಿ ಸಡಿಲಿಕೆ ಮಾಡಿರುವುದರಿಂದ ಗ್ರಾಹಕರಿಗೆ ಹೆಚ್ಚಿನ ಲಾಭ ದೊರೆತಿದೆ.

ಹೊಸ ಮನೆಗಳು ಹಾಗೂ ಹೊಸದಾಗಿ ಬಾಡಿಗೆಗೆ ಬಂದವರಿಗೆ ಮೊದಲ ವರ್ಷದಲ್ಲಿ ತಿಂಗಳಿಗೆ 58 ಯುನಿಟ್ ಮಾತ್ರ ಉಚಿತ ವಿದ್ಯುತ್ ನೀಡಲಾಗುವುದು ಎಂದು ತಿಳಿಸಲಾಗಿತ್ತು. ಅಲ್ಲದೇ, ಒಂದು ಮನೆ ಮಾಲೀಕರಿಗೆ ಒಂದು ಮೀಟರ್‌ಗೆ ಮಾತ್ರ ಉಚಿತ ವಿದ್ಯುತ್ ಸಿಗಲಿದೆ ಎಂದು ತಿಳಿಸಲಾಗಿತ್ತು.

ಆಗಸ್ಟ್ ತಿಂಗಳಲ್ಲಿ ಮೊದಲ ಉಚಿತ ಬಿಲ್‌ಗಳು ಬಂದಾಗ ಗ್ರಾಹಕ ಸ್ನೇಹಿ ನಿರ್ಧಾರ ಕಂಡು ಬಂದಿದೆ. ಹೊಸ ಮನೆಗಳನ್ನು ಹೊರತು ಪಡಿಸಿದರೆ ಉಳಿದ ಎಲ್ಲರಿಗೂ



2022-23ರ ಸಾಲಿನ ಸರಾಸರಿ ಯುನಿಟ್ ಬಳಕೆ ಆಧರಿಸಿ ಉಚಿತ ವಿದ್ಯುತ್ ನಿಗದಿ ಪಡಿಸಲಾಗಿದೆ. ಹೀಗಾಗಿ ವರ್ಷದ ಈಚೆಗೆ ಹೊಸದಾಗಿ ಬಾಡಿಗೆ ಮನೆ ಪಡೆದವರಿಗೆ 58 ಯುನಿಟ್ ಉಚಿತ ವಿದ್ಯುತ್ ಮಾತ್ರ ಲಭ್ಯವಾಗಲಿದೆ ಎಂಬ ಕಳವಳ ನಿವಾರಣೆಯಾಗಿದೆ.

ಸರ್ಕಾರ ಉಚಿತ ವಿದ್ಯುತ್‌ಗಾಗಿ ಇದುವರೆಗೂ ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಮಾಹಿತಿ ಮಾತ್ರ ಪಡೆದಿದೆ. ಬಾಡಿಗೆ, ಭೋಗ್ಯ ಹಾಗೂ ಮನೆ ಮಾಲೀಕತ್ವ ಸೇರಿದಂತೆ ಯಾವುದೇ ದಾಖಲೆಗಳನ್ನು ಪಡೆದಿಲ್ಲ. ಗ್ರಾಹಕರು ನೀಡಿರುವ ಮಾಹಿತಿ ಆಧರಿಸಿಯೇ ಉಚಿತ ವಿದ್ಯುತ್ ನೀಡಲಾಗುತ್ತಿದೆ.

ಇದರ ಜೊತೆಗೆ ಕೆಲವರು ಒಂದೇ ಮನೆಯಲ್ಲಿ ಹಲವು ಮೀಟರ್‌ಗಳಿದ್ದವರೂ ಎಲ್ಲವಕ್ಕೂ ಉಚಿತ ಸೌಲಭ್ಯ ಪಡೆಯುತ್ತಿದ್ದಾರೆ. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಪಡೆಯುವಾಗ, ಮಾಲೀಕರ ಕುಟುಂಬದವರೂ ಪ್ರತ್ಯೇಕವಾಗಿದ್ದರೆ ಅವರೂ ಉಚಿತ ವಿದ್ಯುತ್ ಪಡೆಯಲು ಅವಕಾಶ ಕಲ್ಪಿಸಿತ್ತು. ಅದರ ಲಾಭ ಪಡೆದ ಕೆಲವರು, ತಮ್ಮ ಕುಟುಂಬದ ಬೇರೆ ಬೇರೆಯವರ ಆಧಾರ್‌ಗಳನ್ನು ಮೀಟರ್‌ಗಳಿಗೆ ಜೋಡಿಸಿ ಲಾಭ ಪಡೆಯುತ್ತಿದ್ದಾರೆ.

**ಕಿಲೋವ್ಯಾಟ್ ಹೆಚ್ಚಳಕ್ಕೆ ಅನುಕೂಲ :** ಸರ್ಕಾರ 200 ಯುನಿಟ್‌ಗಳವರೆಗಿನ ವಿದ್ಯುತ್ ಬಳಕೆ ಉಚಿತ ಎಂದು ತಿಳಿಸಿತ್ತು. ಇದರ ಜೊತೆಗೆ, ಕಿಲೋವ್ಯಾಟ್ ವಿದ್ಯುತ್ ಮಂಜೂರಾತಿ ಲೋಡ್ ಶುಲ್ಕವನ್ನೂ ರದ್ದುಗೊಳಿಸಲಾಗಿದೆ.

ಪ್ರಸಕ್ತ ಮನೆ ಬಳಕೆಗೆ ಪ್ರತಿ ಕಿಲೋವ್ಯಾಟ್‌ಗೆ 110 ರೂ. ಶುಲ್ಕವಿದೆ. ಸರ್ಕಾರ ವಿದ್ಯುತ್ ಬಳಕೆ ಮಾತ್ರ ಪರಿಗಣಿಸುತ್ತಿದ್ದು, ಕಿಲೋವ್ಯಾಟ್ ಲೋಡ್ ಪರಿಗಣಿಸಿಲ್ಲ. ಇದೂ ಸಹ ಗ್ರಾಹಕರಿಗೆ ಸಹಾಯಕವಾಗಿದೆ. ಕಿಲೋವ್ಯಾಟ್ ಲೋಡ್ ಹೆಚ್ಚಿಸಿದರೂ ಅದು ಬಿಲ್ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇಲ್ಲ ಎಂದು ಬೆಸ್ಕಾಂ ಮೂಲಗಳು ಹೇಳಿವೆ.

## ವಿಪಕ್ಷಗಳಿಗೆ 'ಇಂಡಿಯಾ' ಹೆಸರು ಹೈಕೋರ್ಟ್‌ನಿಂದ ನೋಟಿಸ್

ನವದೆಹಲಿ, ಆ. 4 - ಪ್ರತಿಪಕ್ಷಗಳ ಒಕ್ಕೂಟಕ್ಕೆ ಇಂಡಿಯಾ ಹೋಲುವ ಐ.ಎನ್.ಡಿ.ಐ.ಎ. ಹೆಸರಿಟ್ಟುಕೊಂಡಿರುವ ಬಗ್ಗೆ ದಾಖಲಾದ ಅರ್ಜಿಯ ವಿಚಾರಣೆ ನಡೆಸಿರುವ ದೆಹಲಿ ಹೈಕೋರ್ಟ್, ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಹಾಗೂ 26 ಪಕ್ಷಗಳ ಪ್ರತಿಕ್ರಿಯೆ ಕೇಳಿದೆ.

ಪ್ರತಿಪಕ್ಷಗಳು ಕಳೆದ ಜುಲೈ 18ರಂದು ಐ.ಎನ್.ಡಿ.ಐ.ಎ. (ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲುಸಿವ್ ಅಲೈಯನ್ಸ್) ಸ್ಥಾಪಿಸಿಕೊಂಡಿದ್ದವು. 2024ರ ಚುನಾವಣೆ ಹಿನ್ನೆಲೆಯಲ್ಲಿ ಈ ಒಕ್ಕೂಟ ಸ್ಥಾಪಿಸಲಾಗಿತ್ತು.

ಇಂಡಿಯಾ ಹೋಲುವ ಹೆಸರಿಟ್ಟುಕೊಂಡಿರುವ ಬಗ್ಗೆ ದಾಖಲಾದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ಹಾಗೂ ನ್ಯಾಯಮೂರ್ತಿ ಅಮಿತ್ ಮಹಾಜನ್ ಅವರನ್ನು ಒಳಗೊಂಡ ಪೀಠ, ನೋಟಿಸ್‌ಗಳನ್ನು ಕಳಿಸಿದೆ.

ಆದರೆ, ಈ ಹಂತದಲ್ಲಿ ಯಾವುದೇ ಮಧ್ಯಂತರ ಆದೇಶ ಹೊರಡಿಸಲು ಹೈಕೋರ್ಟ್ ನಿರಾಕರಿಸಿದೆ. ಪ್ರತಿವಾದಿಗಳ ನಿಲುವು ತಿಳಿಯುವುದಾಗಿ (4ನೇ ಪುಟಕ್ಕೆ)

# ನಮ್ಮನ್ನು ನಾವು ತಿದ್ದಿಕೊಳ್ಳಲು ವಚನಗಳು ಸಹಕಾರಿ



## ಜಗಳೂರಿನ ನಾಲಂದ ಕಾಲೇಜಿನ ಪ್ರಾಚಾರ್ಯ ಸಿ. ತಿಪ್ಪೇಸ್ವಾಮಿ ಅಭಿಮತ

ಜಗಳೂರು, ಆ. 4- ಬಸವಾದಿ ಶರಣರು ರಚಿಸಿರುವ ವಚನ ಸಾಹಿತ್ಯ ಕೇವಲ ಒಂದು ಪ್ರಾಂತ್ಯ, ಪ್ರದೇಶ, ಭಾಷೆಗೆ ಸೀಮಿತವಾಗದೆ ಜಗತ್ತಿನ ಜನರ ಬದುಕನ್ನು ಹಸನಾಗಿಸಲು ಬೇಕಾದ ಎಲ್ಲಾ ಅಗಣಿತ ಅಂಶಗಳನ್ನು ಒಳಗೊಂಡು ಕಾಲಾತೀವಾಗಿ ಬೆಳೆದಿದೆ ಎಂದು ನಾಲಂದ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಸಿ. ತಿಪ್ಪೇಸ್ವಾಮಿ ತಿಳಿಸಿದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ ಮತ್ತು ನಾಲಂಬ ಕಾಲೇಜು ಸಂಯುಕ್ತಾಶ್ರಯದಲ್ಲಿ ನಡೆದ ದತ್ತಿ ಉಪನ್ಯಾಸದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಫ.ಗು. ಹಳಕಟ್ಟಿ, ಎಂ.ಎಂ. ಕಲ್ಬುರ್ಗಿ, ಸುತ್ತೂರು ಜಗದ್ಗುರುಗಳು, ಸಿರಿಗೆರೆ ಜಗದ್ಗುರುಗಳು ಮುಂತಾದವರು ಕಾಪಿಟ್ಟುಕೊಟ್ಟಿರುವ ವಚನಗಳು ಒಂದು ಅಮೂಲ್ಯ ನಿಧಿ. ಅರಿತರೆ ಶರಣ ಮರೆತರೆ ಮಾನವ ಎನ್ನುವಂತೆ ವಚನಗಳ ಸಾರವನ್ನು ನಾವು ಅರಿತು ನಡೆಯಬೇಕಿದೆ. ವಚನಗಳ ಓದಿನ ಹಿನ್ನೆಲೆಯಲ್ಲಿ ನಮಗೆ ನಾವು ನೂರು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ನಮ್ಮನ್ನು ನಾವು ತಿದ್ದಿಕೊಳ್ಳಲು ವಚನಗಳು ಸಹಕಾರಿ ಎಂಬ ಸತ್ಯವನ್ನು ಅರಿಯಬೇಕಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಸವಭಾರತಿ ಪ್ರಥಮ ದರ್ಜೆ ಕಾಲೇಜಿನ ವಿಶ್ರಾಂತ ಪ್ರಾಚಾರ್ಯ ಡಾ. ಪ್ರಭಾಕರ ಲಕ್ಕೋಳ, ಶರಣರ ಬದುಕಿನ ಅನುಭವದ ಗಟ್ಟಿ ಸಾರವೇ ವಚನಗಳು. ಅವು ನಮ್ಮ ಅನುಭವಗಳು ಕೂಡಾ ಆಗಿ ನಮ್ಮ ಬದುಕನ್ನು ಆವರಿಸಿಕೊಂಡಿವೆ. ಹಾಗಾಗಿಯೇ 12ನೇ ಶತಮಾನದಿಂದ ಇಲ್ಲಿಯವರೆಗೆ ವಚನ ಸಾಹಿತ್ಯ ಗಟ್ಟಿಯಾಗಿ ನೆಲೆ ನಿಂತಿದೆ ಎಂದು ಬಣ್ಣಿಸಿದರು.

ದತ್ತಿ ದಾನಿಗಳಾದ ಶ್ರೀಮತಿ ಅಕ್ಕಮಹಾದೇವಿ, ಟಿ.ಆರ್. ಮಹೇಶ್ವರಪ್ಪ, ಶ್ರೀಮತಿ ನಿವೇದಿತಾ ಜಿ.ಟಿ. ಮಹೇಶ್ವರಪ್ಪ ಇವರ ಹೆಸರಿನಲ್ಲಿ ವಚನ ಸಾಹಿತ್ಯದ ಪ್ರಸ್ತುತತೆ ಕುರಿತಾಗಿ ಈ ಸಂದರ್ಭದಲ್ಲಿ ದತ್ತಿ ಉಪನ್ಯಾಸ ಹಮ್ಮಿಕೊಳ್ಳಲಾಗಿತ್ತು.

ನಿವೃತ್ತ ಉಪನ್ಯಾಸಕ ಹೆಚ್.ಎಸ್. ವಸಂತ ಮಾತನಾಡಿ, ಮಡಕೆ ದೈವ, ಮರ ದೈವ ಎಂದು ಕಂಡ ಕಂಡ ದೇವರುಗಳಿಗೆ ಕೈಯ ಮುಗಿಯುವುದಕ್ಕಿಂತ ಏಕ ದೇವೋಪಾಸನೆಗೆ ಇಂಬು ನೀಡಿದವರು ಶರಣರು. ಭಯವೇ ಧರ್ಮದ ಮೂಲವಯ್ಯ ಎನ್ನುವುದಕ್ಕಿಂತ ದಯವೇ ಧರ್ಮದ ಮೂಲವಯ್ಯ ಎಂಬುದನ್ನು 12ನೇ ಶತಮಾನದಲ್ಲಿ ಸಾರಿ ಹೇಳಿದವರು. ಅವರ ವೈಚಾರಿಕ ನಡೆ-ನುಡಿಗಳಿಂದ ವಚನಗಳು ಕನ್ನಡದ ಉಪನಿಷತ್ತು ಎಂದು ತೋರಿಸಿದವರು ಎಂದರು.

ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎನ್.ಟಿ. ಎರ್ರಿಸ್ವಾಮಿ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ದತ್ತಿ ಉಪನ್ಯಾಸಗಳ ಮಹತ್ವ ತಿಳಿಸಿದರು.

ದತ್ತಿ ದಾನಿಗಳಾದ ಟಿ.ಆರ್. ಮಹಾದೇವಪ್ಪ ಮಾತನಾಡಿದರು. ಕಾರ್ಯಕ್ರಮದಲ್ಲಿ ದಿವ್ಯ ಭಾರತಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಾಲರಾಜು, ಕದಳಿ ಮಹಿಳಾ ವೇದಿಕೆಯ ಲೀಲಾವತಿ, ರೇವತಿ, ಶರಣ ಸಾಹಿತ್ಯ ಪರಿಷತ್ತಿ ಕಾರ್ಯದರ್ಶಿಗಳಾದ ಈ. ಸತೀಶ್, ರಖೀಬ್, ಚಂದ್ರಕಾಂತ್, ಡಿ.ಸಿ. ಮಲ್ಲಿಕಾರ್ಜುನ, ಎನ್.ಎಂ. ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಕ್ರೀಡೆಯಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ



## ವಿದ್ಯಾರ್ಥಿಗಳಿಗೆ ಶಾಸಕ ಬಸವರಾಜು ಶಿವಗಂಗಾ ಸಲಹೆ

ಚನ್ನಗಿರಿ, ಆ. 4- ವಿದ್ಯಾರ್ಥಿಗಳು ಆತ್ಮವಿಶ್ವಾಸ, ಮಾನಸಿಕ ಜಾಗರೂಕತೆ ಮತ್ತು ಸ್ವಾಭಿಮಾನವನ್ನು ಹೆಚ್ಚಿಸಲು ಶಾಲಾ ಕ್ರೀಡೆಗಳಲ್ಲಿ ಭಾಗವಹಿಸಬೇಕು. ಶಾಲೆಗಳಲ್ಲಿ ಕ್ರೀಡೆಯು ಮುಖ್ಯವಾಗಿದೆ ಎಂದು ಶಾಸಕ ಬಸವರಾಜು ವಿ. ಶಿವಗಂಗಾ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅವರು, ನೀತಿಗೆರೆ ಗ್ರಾಮದ ಎಸ್.ವಿ.ಎಸ್. ಹಿ.ಪ್ರಾ. ಶಾಲೆಯಲ್ಲಿ ಚಿಕ್ಕಗಂಗೂರು ಹೆಬ್ಬಳಗೆರೆ ಕ್ಲಸ್ಟರ್ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡೆಯಿಂದ ನಾಯಕತ್ವ, ತಾಳ್ಮೆ ತಂಡದ ಪ್ರಯತ್ನಗಳು ಮತ್ತು ಸಾಮಾಜಿಕ ಕೌಶಲ್ಯಗಳಂತಹ ವಿವಿಧ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಲು ಸಹಾಯ ಮಾಡುತ್ತದೆ. ಕ್ರೀಡೆಗಳು ವಿದ್ಯಾರ್ಥಿಗಳು ಸದೃಢವಾಗಿ ಮತ್ತು ಆರೋಗ್ಯವಾಗಿರಲು ಸಹಾಯ ಮಾಡುತ್ತದೆ ಎಂದರು.

ನಂತರ ದೇವರಹಳ್ಳಿ ಗ್ರಾಮದ ಸರ್ಕಾರಿ ಶಾಲಾ ಆವರಣದಲ್ಲಿ ದೇವರಹಳ್ಳಿ-ಕಗತೂರು ಕ್ಲಸ್ಟರ್ ಮಟ್ಟದ ಕ್ರೀಡಾಕೂಟಕ್ಕೂ ಶಾಸಕ ಬಸವರಾಜು ವಿ. ಶಿವಗಂಗಾ ಚಾಲನೆ ನೀಡಿದರು. ಶಿಕ್ಷಣ ಇಲಾಖೆ ಅಧಿಕಾರಿಗಳು ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ಕ್ಯಾಸೇನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಬಸಮ್ಮ ಮಂಜಣ್ಣ



ಜಗಳೂರು, ಆ.4- ತಾಲ್ಲೂಕಿನ ಕ್ಯಾಸೇನಹಳ್ಳಿ ಗ್ರಾಮ ಪಂಚಾಯತಿ ಎರಡನೇ ಅವಧಿಯ ನೂತನ ಅಧ್ಯಕ್ಷರಾಗಿ ಶ್ರೀಮತಿ ಎ.ಡಿ.ಬಸಮ್ಮ ಮಂಜಣ್ಣ ಹಾಗು ಉಪಾಧ್ಯಕ್ಷರಾಗಿ ಹನುಮಂತಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕ್ಯಾಸೇನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಒಟ್ಟು 18 ಸದಸ್ಯರು ಇದ್ದು ಎರಡನೇ ಅವಧಿಯ ಅಧ್ಯಕ್ಷ ಸ್ಥಾನವು ಪರಿಶಿಷ್ಠ ಜಾತಿ ಮಹಿಳೆ ಹಾಗು ಉಪಾಧ್ಯಕ್ಷರ ಸ್ಥಾನ ಸಾಮಾನ್ಯ ಸ್ಥಾನಕ್ಕೆ ಮೀಸಲಾಗಿತ್ತು ಶುಕ್ರವಾರ ಚುನಾವಣೆ ನಡೆಯಿತು. ಅಧ್ಯಕ್ಷರ ಸ್ಥಾನಕ್ಕೆ ಬಸಮ್ಮ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಹನುಮಂತಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿದ್ದು ನಾಮಪತ್ರ ಸ್ವೀಕಾರ ನಂತರ ಇಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಮೀನುಗಾರಿಕಾ ಇಲಾಖೆ ಸಹಾಯಕ ನಿರ್ದೇಶಕ ಗಿರೀಶ್ ಕುಮಾರ್ ಘೋಷಣೆ ಮಾಡಿದರು.

# ಗ್ಯಾರಂಟಿಗೆ ಎಸ್ಸಿ, ಎಸ್ಟಿ ಹಣ : ದಸಂಸ ಖಂಡನೆ




ಹರಿಹರ, ಆ. 4 - ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅಭಿವೃದ್ಧಿಗಾಗಿ ಇರುವ ವಿಶೇಷ ಅನುದಾನದಲ್ಲಿ (ಎಸ್.ಸಿ.ಪಿ, ಮತ್ತು ಟಿ.ಎಸ್.ಪಿ.) 11,000 ಕೋಟಿ ರೂ.ಗಳನ್ನು ಐದು ಗ್ಯಾರಂಟಿಗಳ ಜಾರಿಗಾಗಿ ಬಳಕೆ ಮಾಡುವ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ರಾಜ್ಯ ಅಭಿವೃದ್ಧಿ ಪರಿಷತ್ ತೀರ್ಮಾನವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಹರಿಹರ ತಾಲ್ಲೂಕು ಘಟಕ ತೀವ್ರವಾಗಿ ವಿರೋಧಿಸಿದೆ.

ಮುಖ್ಯಮಂತ್ರಿ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2023-24ನೇ ಸಾಲಿನ ಬಜೆಟ್‌ನಲ್ಲಿ 34,000 ಕೋಟಿ ಹಣವನ್ನು ಮೀಸಲಿಟ್ಟಿತ್ತು. ಈ ಹಣದಲ್ಲಿ 11,000 ಕೋಟಿಗಳನ್ನು ಗ್ಯಾರಂಟಿಗಳಿಗೆ ಬಳಸುವುದು ಕಾನೂನು ಬಾಹಿರ ಎಂದು ಸಮಿತಿಯ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಪತ್ರಿಕಾ ಹೇಳಿಕೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಸ್.ಇ.ಪಿ., ಟಿ.ಎಸ್.ಪಿ ಯೋಜನೆಯ ಅನುದಾನ ದುರ್ಬಳಕೆ ಆಗಿದೆ ಎಂದು ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ, ಸಿದ್ದರಾಮಯ್ಯನವರೇ ವಿರೋಧ ವ್ಯಕ್ತಪಡಿಸಿದ್ದರು. ಈಗ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಸ್.ಇ.ಪಿ, ಟಿ.ಎಸ್.ಪಿ ಕಾಯ್ದೆಯ ಸೆಕ್ಷನ್ 7 (ಡಿ) ಯನ್ನು ರದ್ದುಪಡಿಸಿದ್ದು ವಿಪರ್ಯಾಸವಾಗಿದೆ ಎಂದು ಮಹಾಂತೇಶ್ ಹೇಳಿದ್ದಾರೆ.

ಈ ಅನುದಾನದಲ್ಲಿ ಪರಿಶಿಷ್ಟ ಜಾತಿ, ವರ್ಗಗಳ ಹಾಸ್ಟೆಲ್ ಮತ್ತು ವಸತಿ ಶಾಲೆಗಳ ನಿರ್ಮಾಣ, ವಸತಿ ಶಾಲೆಗಳ ಭೂಮಿ ಖರೀದಿಗೆ ಮತ್ತು ಗಂಗಾ ಕಲ್ಯಾಣ ಯೋಜನೆಗೆ ಬಳಸಬೇಕೆಂದು ಸಮಿತಿಯು ಸರ್ಕಾರವನ್ನು ಒತ್ತಾಯಿಸುತ್ತದೆ. ಇಲ್ಲವಾದರೆ ಸರ್ಕಾರದ ವಿರುದ್ಧ ತೀವ್ರ ಹೋರಾಟ ಮಾಡಬೇಕಾಗುತ್ತದೆ ಎಂದವರು ತಿಳಿಸಿದ್ದಾರೆ.

# ಹರಿಹರ ಗ್ರಾಮದೇವತೆಗೆ ವಿಶೇಷ ಪೂಜೆ



ಹರಿಹರ, ಆ.4- ನಗರದ ಹೊಸಭರಂಪುರ ಬಡಾವಣೆಯ ಶ್ರೀ ಗ್ರಾಮದೇವತೆ ಊರಮ್ಮ ದೇವಿಗೆ ಆಷಾಢ ಮಾಸದ ನಿಮಿತ್ತ ವಿಶೇಷ ಅಭಿಷೇಕ, ಅಲಂಕಾರ ಮಹಾಮಂಗಳಾರತಿ ನಂತರ ಪಡ್ಲಿಗೆ ತುಂಬುವಿಕೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿಯವರಾದ ಪೂಜಾರ್ ಈರಣ್ಣ, ಕೆ.ಬಿ.ರಾಜಶೇಖರ್, ಬೆಣ್ಣೆ ರೇವಣಸಿದ್ದಪ್ಪ, ಸುರೇಶ್ ಚಂದಪೂರ್, ಗುತ್ಯಪ್ಪ, ಎಂ. ಚಿದಾನಂದ ಕಂಚಿಕೇರಿ, ರಾಘು ಚೌಗಲೆ, ಹಣಗಿ ಸುರೇಶಪ್ಪ, ರುದ್ರೇಶ್ ದಾವಣಗೆರೆ, ಹಾವನೂರು ಈರಣ್ಣ, ಮಜ್ಜಿಗೆ ಚಂದ್ರಪ್ಪ, ಸಿದ್ದಪ್ಪ ಸಿಂಗಾಡಿ ಅರ್ಚಕರು ನಾಗರಾಜ್ ಇತರರು ಹಾಜರಿದ್ದರು.

# ಹಿರೆಮೆಗಳಗೇರಿ ಗ್ರಾ.ಪಂಚಾಯ್ತಿ ಅಧ್ಯಕ್ಷರಾಗಿ ಪ್ರತಿಭಾ



ಹರಪನಹಳ್ಳಿ, ಆ.4- ತಾಲ್ಲೂಕಿನ ಹಿರೆಮೆಗಳಗೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಪ್ರತಿಭಾ ಪರಶುರಾಮಪ್ಪ ಹಾಗೂ ಉಪಾಧ್ಯಕ್ಷರಾಗಿ ರೇಖಾ ಇವರು ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಯಸಿಂಹ ಘೋಷಣೆ ಮಾಡಿದರು.

ಶುಕ್ರವಾರ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಒಟ್ಟು 22 ಸದಸ್ಯರಿದ್ದು, ಅಧ್ಯಕ್ಷ ಸ್ಥಾನ ಬಯಸಿ ಪ್ರತಿಭಾ ಪರಶುರಾಮಪ್ಪ ಮತ್ತು ಎಲ್. ಹನುಮಂತಪ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ರೇಖಾ ಕರಿಬಸಪ್ಪ ಮತ್ತು ವಿಶಾಲಾಕ್ಷಮ್ಮ ನಾಮಪತ್ರ ಸಲ್ಲಿಸಿದ್ದರು.

ಪ್ರತಿಭಾ ಪರಶುರಾಮಪ್ಪನವರಿಗೆ 13 ಮತಗಳು, ಎಲ್.ಹನುಮಂತಪ್ಪನವರಿಗೆ 9 ಹಾಗೂ ರೇಖಾ ಕರಿಬಸಪ್ಪ 12, ವಿಶಾಲಾಕ್ಷಮ್ಮ 10 ಮತಗಳು ಬಂದಿದ್ದು, ಅಧ್ಯಕ್ಷರಾಗಿ ಪ್ರತಿಭಾ ಹಾಗೂ ಉಪಾಧ್ಯಕ್ಷರಾಗಿ ರೇಖಾ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ತಿಳಿಸಿದರು.

ಈ ಸಂದರ್ಭದಲ್ಲಿ ಪಿಡಿಓ ಬಿ.ಎಂ.ರೇವಣಸಿದ್ದಪ್ಪ, ಅಂಜಿನಪ್ಪ, ಡಿ.ವೆಂಕಟೇಶ್, ಹೊಸಪೇಟೆ ಮಂಜಮ್ಮ, ನೀಲಮ್ಮ, ವಿಶಾಲಮ್ಮ, ಕಾವೇರಿ, ಪಿ.ತಿಮ್ಮಣ್ಣ, ಚಿಕ್ಕಮೆಗಳಗೆರಿ ಪರಶುರಾಮಪ್ಪ, ನೀಲಿಬಾಯಿ, ಕೃಷ್ಣನಾಯ್ಕ, ರೇಣುಕಮ್ಮ, ಚಂದ್ರಪ್ಪ, ವಿರುಪಾಕ್ಷಪ್ಪ, ಬಿದರಿ ಹನುಮಂತಪ್ಪ, ವೆಂಕಟೇಶ್, ಸಿಂಗ್ರಿಹಳ್ಳಿ ಪರಶುರಾಮ, ಅರುಣ, ಅಂಜಿನಪ್ಪ, ಗ್ರಾಪಂ ಸಿಬ್ಬಂದಿ ಇದ್ದರು.

# ಭರಮಸಾಗರದಲ್ಲಿ ನಾಳೆ ನೂತನ ಉಪ ಅಂಚೆ ಕಚೇರಿ ಉದ್ಘಾಟನೆ



ಭರಮಸಾಗರ, ಆ. 4 - ತಾಲ್ಲೂಕಿನ ಎಲ್ಲಾ ಅರ್ಹತೆಯನ್ನು ಹೊಂದಿರುವ ಭರಮಸಾಗರ ಅಂಚೆ ಇಲಾಖೆಗೆ ನೂತನವಾಗಿ ನಿರ್ಮಿಸಿರುವ ಕಟ್ಟಡದ ಉದ್ಘಾಟನಾ ಸಮಾರಂಭವು ನಾಡಿದ್ದು ದಿನಾಂಕ 6 ರ ಭಾನುವಾರ ನಡೆಯಲಿದೆ.

ಈ ಕಟ್ಟಡವು 110×80 ಅಡಿಗಳ ಅಳತೆಯುಳ್ಳ ಜಾಗದಲ್ಲಿ ಕಟ್ಟಡ ನಿರ್ಮಾಣವಾಗಲಿದೆ. ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರು ಶಿಲಾನ್ಯಾಸ ನೇರವೇರಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಎಂ. ಚಂದ್ರಪ್ಪ ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್, ಅಂಚೆ ಇಲಾಖೆಯ ಕರ್ನಾಟಕ ವೃತ್ತದ ಎಸ್. ರಾಜೇಂದ್ರ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಂಜುಳಮ್ಮ ಕರಿಬಸಪ್ಪ ಭಾಗವಹಿಸುವರು. ಚಿತ್ರದುರ್ಗದ ಅಂಚೆ ಅಧೀಕ್ಷಕ ಓ. ವಿರೂಪಾಕ್ಷಪ್ಪ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಇದೇ ಸಂದರ್ಭದಲ್ಲಿ ನೂತನ ಅಂಚೆ ಇಲಾಖೆಯ ಖಾಲಿ ಸ್ಥಳದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸ್ಥಳೀಯ ಅಂಚೆ ಪಾಲಕರು ಜಿ. ಹೆಚ್ ಸುರೇಶ್ ತಿಳಿಸಿದ್ದಾರೆ.

# ಶಿವ ವಿವಿಧೋದ್ದೇಶ ಸಹಕಾರಿ ಸೌಹಾರ್ದ ಬ್ಯಾಂಕ್ ಅಧ್ಯಕ್ಷರಾಗಿ ಕರೇಗೌಡ



ರಾಣೇಬೆನ್ನೂರು, ಆ. 4- ಇಲ್ಲಿನ ಶಿವ ವಿವಿಧೋದ್ದೇಶ ಸಹಕಾರಿ ಸೌಹಾರ್ದ ಬ್ಯಾಂಕ್ ಪದಾಧಿಕಾರಿಗಳ ಆಯ್ಕೆ ಇಂದು ನಡೆದಿದ್ದು, ಅಧ್ಯಕ್ಷರಾಗಿ ಜೆ.ಎಸ್.ಕರೇಗೌಡ, ಉಪಾಧ್ಯಕ್ಷರಾಗಿ ಜೆ. ಕೆ. ಗೌಡಶಿವಣ್ಣನವರ ಅವಿರೋಧ ಆಯ್ಕೆಯಾಗಿದ್ದಾರೆ.

ಅಶೋಕ ಗಂಗನಗೌಡ್ರ, ಲೋಕೇಶ ನರಸಗೊಂಡರ, ಕರಬಸಪ್ಪ ಬಣಕಾರ, ಮರಬಸಪ್ಪ ಹೊಂಬರಡಿ, ಜಿ.ಜಿ. ಹೊಟ್ಟಿಗೌಡ್ರ, ರಮೇಶ ಮುದಿಗೌಡ್ರ, ಬಸವರಾಜ ಗೌಡಶಿವಣ್ಣನವರ, ಯಶೋಧ ಮುಡದ್ಯಾವಣ್ಣನವರ, ಲಕ್ಷ್ಮಣ ಚಳಗೇರಿ, ಕವಿತಾ ಗೂಳಣ್ಣನವರ, ಮಹ್ಮದಲಿ ಅಸುಂಡಿ, ಶಿವಮೂರ್ತಿ ನಾಯಕ, ಪಕ್ಕೀರಪ್ಪ ಹೊನ್ನಾಳಿ ನಿರ್ದೇಶಕ ಮಂಡಳಿ ಸದಸ್ಯರು.

# ಶ್ರುತಿ ಮಾಕನೂರು ಅವರಿಗೆ ಪಿಹೆಚ್‌ಡಿ



ದಾವಣಗೆರೆ, ಆ. 4 - ನಗರದ ಉದ್ಯಮಿ ಹಾಗೂ ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾಗಿದ್ದ ದಿ. ಮಾಕನೂರು ಮಲ್ಲಿಕಾರ್ಜುನಪ್ಪ ಅವರ ಪುತ್ರಿ ಹಾಗೂ ಬಾಪೂಜಿ ಎಂ.ಬಿ.ಎ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಶೃತಿ ಮಾಕನೂರು ಅವರಿಗೆ ದಾವಣಗೆರೆ ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿದೆ. ದಾವಣಗೆರೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಚೇರ್‌ಮೆನ್ ಹಾಗೂ ಪ್ರಾಧ್ಯಾಪಕ ಡಾ. ಜೆ.ಕೆ.ರಾಜು ಅವರ ಮಾರ್ಗದರ್ಶನದಲ್ಲಿ 'ಎ ಸ್ಟಡಿ ಆನ್ ವರ್ಕ್ ಲೈಫ್ ಬ್ಯಾಲೆನ್ಸ್ ಆಫ್ ವುಮೆನ್ ಎಂಪ್ಲಾಯಿಸ್ ಆಫ್ ಬ್ಯಾಂಕಿಂಗ್ ಸೆಕ್ಟರ್ ಇನ್ ಕರ್ನಾಟಕ' ವಿಷಯ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಶೃತಿ ಅವರಿಗೆ ಈ ಪದವಿ ಲಭಿಸಿದೆ.

# ಕುಕ್ಕವಾಡಲ್ಲಿ ಇಂದು ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ಸರ್ವ ಸದಸ್ಯರ ಸಭೆ



ದಾವಣಗೆರೆ ತಾಲ್ಲೂಕಿನ ಕುಕ್ಕುವಾಡ ಗ್ರಾಮದ ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತದ 26ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಇಂದು ಮಧ್ಯಾಹ್ನ 3-30 ಗಂಟೆಗೆ ಕುಕ್ಕುವಾಡದ ಶ್ರೀ ಮಾರಿಕಾಂಬ ದೇವಸ್ಥಾನದ ಮುಂಭಾಗದಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಜಿ.ಎಂ. ರುದ್ರಗೌಡ್ರು ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಂಸ್ಥಾಪಕ ಅಧ್ಯಕ್ಷ ರುದ್ರಗೌಡ್ರು ತಿಳಿಸಿದ್ದಾರೆ.


॥ ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ ॥

**ಗುರು ಲಿಂಗ ಜಂಗಮರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ನಗರ, ಕೆ.ಬಿ. ಬಡಾವಣೆ ಕಿರುವಾಡಿ ಲೇಔಟ್ ವಾಸಿ

ಶ್ರೀಮತಿ ಎಂ.ಎಸ್. ಶಿವರುದ್ರಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.



ದಿನಾಂಕ : 29.07.2023ನೇ ಶನಿವಾರ ಬೆಳಗ್ಗೆ 5 ಗಂಟೆಗೆ ನಮ್ಮ ಪೂಜ್ಯ ಪತಿಯವರಾದ ಕಾರಿಗನೂರು ಮಠದ

**ಶ್ರೀ ಹೆಚ್. ಶಿವಮೂರ್ತಯ್ಯ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಗುರು ಲಿಂಗ ಜಂಗಮರಾಧನೆಯನ್ನು**

ದಿನಾಂಕ : 06.08.2023ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ #116/71, ಸಿದ್ದಲಿಂಗೇಶ್ವರ ಕೃಪ, ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ದಾವಣಗೆರೆಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತ ಕುಟುಂಬ ವರ್ಗ : ಶ್ರೀಮತಿ ಎಂ.ಎಸ್. ಶಿವರುದ್ರಮ್ಮ ಮತ್ತು ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ಮರಿಮೊಮ್ಮಗ ಕಾರಿಗನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

ಮೊ :94484 43164, 81978 89189

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ಕುಂಚೂರು ಗ್ರಾ.ಪಂ.ಗೆ ಕೂಬ್ಯನಾಯ್ಕ ಅಧ್ಯಕ್ಷ, ಪಾರ್ವತಮ್ಮ ಉಪಾಧ್ಯಕ್ಷೆ



ಹರಪನಹಳ್ಳಿ, ಆ.4. ತಾಲ್ಲೂಕಿನ ಕುಂಚೂರು ಗ್ರಾಮ ಪಂಚಾಯಿತಿಗೆ ಶಾಸಕರಾದ ಎಂ.ಪಿ.ಲತಾ ಮಲ್ಲಿಕಾರ್ಜುನರವರ ಬೆಂಬಲಿತ ಅಭ್ಯರ್ಥಿ ಕೂಬ್ಯನಾಯ್ಕ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ಪಾರ್ವತಮ್ಮ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಗ್ರಾಮ ಪಂಚಾಯಿತಿಯಲ್ಲಿ ಶುಕ್ರವಾರ ನಡೆದ ಅಧ್ಯಕ್ಷ ಸ್ಥಾನಕ್ಕೆ ಕೂಬ್ಯನಾಯ್ಕ ಹಾಗೂ ಎ. ರತ್ನಮ್ಮನವರು ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ವತಮ್ಮ ಮತ್ತು ಮಲ್ಲಮ್ಮ ನಾಮಪತ್ರ ಸಲ್ಲಿಸಿದ್ದರು.

ಒಟ್ಟು 19 ಸದಸ್ಯರು ಹಾಜರಿದ್ದು, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕೂಬ್ಯನಾಯ್ಕ 13 ಮತಗಳನ್ನು ಪಡೆದಿದ್ದರೆ, ಎ.ರತ್ನಮ್ಮ 6 ಮತ ಪಡೆದು ಪರಾಜಿತರಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಪಾರ್ವತಮ್ಮ 12, ಪರಾಜಿತ ಮಲ್ಲಮ್ಮ 7 ಮತಗಳನ್ನು ಪಡೆದಿದ್ದಾರೆ ಎಂದು ಚುನಾವಣಾ ಅಧಿಕಾರಿಯಾಗಿ ಎಇಇ ಪ್ರಸನ್ನಕುಮಾರ್ ತಿಳಿಸಿದರು.


ಈ ಸಂದರ್ಭದಲ್ಲಿ ಕೆ. ನಾಗರಾಜಪ್ಪ, ಶೌಕತ್, ಎಸ್. ಸೋಮಪ್ಪ, ಸನಾವುಲ್ಲಾ, ವಕೀಲ ಲಕ್ಷ್ಮಣ, ಪಕ್ಕೀರನಾಯ್ಕ, ಷಫಿಸಾಬ್, ಇಮಾಮ್‌ಸಾಬ್, ಕೆ.ಸುಮಯ, ರತ್ನಮ್ಮ, ಮಾಬುಸಾಬ್, ಚಂದ್ರಮ್ಮ ಎಂ ಅರಸನಾಳು, ಮಂಜಪ್ಪ, ಮಲ್ಲಪ್ಪ, ಬಿ.ಮಂಜುಳಾ, ಎಸ್.ಕೊಟ್ರೇಶ್, ಎಚ್.ಸಿದ್ದಲಿಂಗಪ್ಪ, ಮಹೇಶನಾಯ್ಕ, ಸೇರಿದಂತೆ ಇತರರು ಇದ್ದರು.

## ಶ್ರೀಮತಿ ಸುಭದ್ರಮ್ಮ ಕೋಟೆಬಾಗಿಲು ನಿಧನ



ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ವಾಸಿ ದಿ. ಬಸವಲಿಂಗಪ್ಪನವರ (ಕೋಟೆಬಾಗಿಲು) ಪತ್ನಿಯಾದ ಶ್ರೀಮತಿ ಸುಭದ್ರಮ್ಮ (79) ಇವರು ದಿನಾಂಕ 04.08.2023ನೇ ಶುಕ್ರವಾರ ರಾತ್ರಿ 8ಕ್ಕೆ ನಿದನರಾದರು. ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.08.2023ನೇ ಶನಿವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

## ಆರ್.ಕೆ. ಬಾಬು ನಿಧನ



ದಾವಣಗೆರೆ ಆಜಾದ್ ನಗರ 1ನೇ ಮೇನ್, 12ನೇ ಕ್ರಾಸ್ ವಾಸಿ ಆರ್.ಕೆ. ಬಾಬು (ಆಟೋ ಟಿಂಕರ್) (71) ಇವರು ದಿನಾಂಕ : 4-8-2023 ರ ಶುಕ್ರವಾರ ರಾತ್ರಿ 7 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ : 5-8-2023ರ ಶನಿವಾರ ಬೆಳಿಗ್ಗೆ 11 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ಹಳೇ ಖಬರ್ ಸ್ಥಾನದಲ್ಲಿ ನೆರವೇರಿಸಲಾಗುವುದು.

## ಎಲೇಬೆತೂರು ಸಂಗಪ್ಪರ ಬಸಲಿಂಗಪ್ಪ ನಿಧನ



ದಾವಣಗೆರೆ ತಾಲ್ಲೂಕಿನ ಎಲೇಬೆತೂರು ಗ್ರಾಮದ ವಾಸಿ ದಿ. ಸಂಗಪ್ಪರ ನಿಂಗಪ್ಪನವರ ಪುತ್ರ ಸಂಗಪ್ಪರ ಬಸಲಿಂಗಪ್ಪ (65) ಇವರು ದಿನಾಂಕ04.08.2023ನೇ ಶುಕ್ರವಾರ ಮಧ್ಯಾಹ್ನ 3ಕ್ಕೆ ನಿದನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.08.2023ನೇ ಶನಿವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮ ಎಲೇಬೆತೂರಿನ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ಕುಮಾರ ಆರೋಪ ಗುದ್ದೋಡುವ ಪ್ರಕರಣ

ಬೆಂಗಳೂರು, ಆ. 4 - ಜೆ.ಡಿ.ಎಸ್. ನಾಯಕ ಹೆಚ್.ಡಿ. ಕುಮಾರಸ್ವಾಮಿ ಯವರದ್ದು ಯಾವಾಗಲೂ ಗುದ್ದೋಡುವ ಪ್ರಕರಣ. ವೃಥಾ ಆರೋಪಗಳನ್ನು ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಈ ಹಿಂದೆ ಪೆನ್‌ಡ್ರೈವ್ ತೋರಿಸಿದ್ದರು. ಅದನ್ನು ಸಾಬೀತು ಮಾಡಿದರಾ? ಜೇಬಲ್ಲಿ ಇಟ್ಟುಕೊಂಡು ಏನು ಮಾಡುತ್ತಾರೆ? ಅವರ ಬಳಿ ಪೆನ್‌ಡ್ರೈವ್ ಇದ್ದರೆ ತಾನೇ ಹೊರಗೆ ಬಿಡುವುದು ಎಂದು ಹೇಳಿದ್ದಾರೆ.

# ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಪಿ.ಟಿ.ಭರತ್



ಹರಪನಹಳ್ಳಿ, ಆ.4- ತಾಲ್ಲೂಕಿನ ಲಕ್ಷ್ಮೀಪುರ ಗ್ರಾಮ ಪಂಚಾಯಿತಿಯಲ್ಲಿ ಶುಕ್ರವಾರ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಉಪಾಧ್ಯಕ್ಷ ಸ್ಥಾನಕ್ಕೆ ಅವಿರೋಧ ಆಯ್ಕೆ ನಡೆದಿದೆ.

ಒಟ್ಟು 16 ಸಂಖ್ಯಾ ಬಲವಿರುವ ಗ್ರಾಮ ಪಂಚಾಯಿತಿಯಲ್ಲಿ ಒಬ್ಬರು ರಾಜೀನಾಮೆ ನೀಡಿದ್ದು, 15 ಸದಸ್ಯರಲ್ಲಿ ಒಬ್ಬರು ಗೈರಾಗಿದ್ದು 14 ಜನ ಸದಸ್ಯರ ಕೋರಂನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪಿ.ಟಿ.ಭರತ್ ಮತ್ತು ಹೇಮರಾಜನಾಯ್ಕ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷರಾಗಿ ಪಿರೀಬಾಯಿ ಹನುಮಂತನಾಯ್ಕ ಮಾತ್ರ ನಾಮಪತ್ರ ಸಲ್ಲಿಸಿದ್ದರು.

ಬಳಿಕ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು ಪಿ.ಟಿ.ಭರತ್ ಅವರು 11 ಮತ ಪಡೆಯುವ ಮೂಲಕ ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಒಬ್ಬರೇ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಪಿರೀಬಾಯಿ ಹನುಮಂತನಾಯ್ಕ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಜಯರಾಜ್ ಕರ್ತವ್ಯ ನಿರ್ವಹಿಸಿದರು. ಈ ಸಂದರ್ಭದಲ್ಲಿ ಪಿಡಿಓ ಬೋರಯ್ಯ, ಮುಖಂಡರಾದ ಪಿ.ಟಿ.ಅವಿನಾಶ, ರವಿನಾಯ್ಕ, ಉಮೇಶನಾಯ್ಕ, ಪವನಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನದಿಯಲ್ಲಿ ಮುಳುಗಿ ತಾಯಿ, ಮಗಳ ಸಾವು

ಹರಿಹರ, ಆ.4 - ತುಂಗಭದ್ರಾ ನದಿಯಲ್ಲಿ ತಾಲ್ಲೂಕಿನ ಮೂಗಿನಗುಂದಿ ಗ್ರಾಮದ ತಾಯಿ ಹಾಗೂ ಮಗಳು ಮುಳುಗಿ ಮೃತಪಟ್ಟ ಘಟನೆ ನಿನ್ನೆ ನಡೆದಿದೆ. ಆನಂದ್ ಪತ್ನಿ ಭಾಗ್ಯಜೋತಿ (40) ಹಾಗೂ ಮಗಳು ವೇದಿಕಾ (9) ವರ್ಷದ ತಾಯಿ ಮತ್ತು ಮಗಳು ನೀರಿನಲ್ಲಿ ಸಾವಿಗೀಡಾಗಿದ್ದಾರೆ. ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಈಜು ಪರಿಣಿತರು ಮೃತದೇಹ ಹೊರ ತಂದಿದ್ದಾರೆ.

ಸ್ಥಳಕ್ಕೆ ಪಿಎಸ್ಐ ದೇವಾನಂದ್, ಅಗ್ನಿಶಾಮಕ ಠಾಣೆ ಪಿಎಸ್ಐ ಸಂಜೀವ ಕುಮಾರ್ ಮತ್ತಿತರರು ಭೇಟಿ ನೀಡಿದ್ದರು.


KA/SK/CTA-275/2021-2023. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

# ರಾಜ್ಯದಲ್ಲಿ ಭ್ರಷ್ಟಾಚಾರ, ಪರ್ಸೆಂಟೇಜ್ ಸಂಗ್ರಹ ಅವ್ಯಾಹತ

## ಗೃಹ ಇಲಾಖೆಯಲ್ಲಿ ವೈಎಸ್‌ಟಿ ಟ್ಯಾಕ್ಸ್ ದಂಧೆಕೋರರು
## 250 ಕೋಟಿ ಕಲೆಕ್ಷನ್; ಬಿಡಿಎಗೆ ಟಾರ್ಗೆಟ್ ಫಿಕ್ಸ್
## ನಾನು ಪ್ರವಾಸ ಹೋಗಿದ್ದು ಯುರೋಪಿಗೆ, ಸಿಂಗಾಪುರಕ್ಕೆ ಅಲ್ಲ



### ಕಾಂಗ್ರೆಸ್ ಸರ್ಕಾರದ ವಿರುದ್ಧ ಹೆಚ್.ಡಿ. ಕುಮಾರಸ್ವಾಮಿ ಆರೋಪಗಳ ಸುರಿಮಳೆ

ಬೆಂಗಳೂರು, ಆ.4- ವಿದೇಶ ಪ್ರವಾಸದಿಂದ ಹಿಂದಿರುಗಿದ ತಕ್ಷಣದಿಂದಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವರ್ಗಾವಣೆ ದಂಧೆ, ಭ್ರಷ್ಟಾಚಾರ, ಕಮೀಷನ್ ಸಂಗ್ರಹದ ಬಗ್ಗೆ ಗುರುತರ ಆರೋಪಗಳನ್ನು ಮಾಡಿದ್ದಾರೆ. ಕಳೆದ ರಾತ್ರಿ ಅವರು ಯುರೋಪ್ ಪ್ರವಾಸ ಮುಗಿಸಿಕೊಂಡು ಬೆಂಗಳೂರಿಗೆ ವಾಪಸ್ ಬಂದರು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮಗಳು ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರ ನೀಡಿದರು.

ಕಾಂಗ್ರೆಸ್ ಪಕ್ಷ ಈಸ್ಟ್ ಇಂಡಿಯಾ ಪಕ್ಷದಂತೆ ರಾಜ್ಯವನ್ನು ಲೂಟಿ ಮಾಡುತ್ತಿದೆ. ಪೊಲೀಸ್ ವರ್ಗಾವಣೆಯಲ್ಲಿ ವೈಎಸ್‌ಟಿ ದಂಧೆಕೋರರು ಶಾಮೀಲಾಗಿದ್ದಾರೆ. ಬಿಡಿಎ ಅಧಿಕಾರಿಗಳಿಂದ 250 ಕೋಟಿ ರೂಪಾಯಿ ಡಿಮ್ಯಾಂಡ್ ಮಾಡಲಾಗಿದೆ ಎಂಬುದು ಮಾಜಿ ಮುಖ್ಯಮಂತ್ರಿ ಅವರು ಮಾಡಿರುವ ಗಂಭೀರ ಆರೋಪಗಳು.

**ದುಡ್ಡಿದ್ದರೆ ಮನೆ ಒಳಕ್ಕೆ ಬನ್ನಿ ಎನ್ನುವ ಸಚಿವರ ಚೇಲಾಗಳು :**

ರಾಜ್ಯದಲ್ಲಿ ಪರ್ಸೆಂಟೇಜ್ ಸಂಗ್ರಹ ಅವ್ಯಾಹತ ವಾಗಿ ನಡೆಯುತ್ತಿದೆ. ಸಚಿವರೊಬ್ಬರು ನೇರವಾಗಿ ಗುತ್ತಿಗೆದಾರರಿಂದ ಕಮೀಷನ್‌ಡಿಮ್ಯಾಂಡ್ ಮಾಡುತ್ತಿದ್ದಾರೆ. ಇತ್ತೀಚೆಗೆ ಆ ಸಚಿವರನ್ನು ಭೇಟಿಯಾಗಲು ಹೋಗಿದ್ದ ಗುತ್ತಿಗೆದಾರರಿಗೆ, ಹಣ ತಂದಿದ್ದರೆ ಒಳಕ್ಕೆ ಬನ್ನಿ, ಇಲ್ಲವಾದರೆ ಹೊರಗೇ ಇರಿ ಎಂದು ಆ ಸಚಿವರ ಚೇಲಾಗಳು ತಾಕೀತು ಮಾಡಿದ್ದಾರೆ. ಇವರು ಹೋಗಿ ದೆಹಲಿಯಲ್ಲಿ ಭ್ರಷ್ಟಾಚಾರ ಕಡಿಮೆ ಮಾಡುತ್ತೇವೆ ಎಂದು ರಾಹುಲ್ ಗಾಂಧಿ ಅವರಿಗೆ ಹೇಳುತ್ತಾರೆ. ಇಂಥವರಿಂದ ರಾಜ್ಯದ ಉದ್ಧಾರ ಸಾಧ್ಯವೇ? ಪಾರದರ್ಶಕ ಆಡಳಿತ ನೀಡಲು ಆಗುತ್ತದೆಯೇ? ಎಂದು ಅವರು ಪ್ರಶ್ನಿಸಿದರು.

**250 ಕೋಟಿಗೆ ಡಿಮ್ಯಾಂಡ್:** ಬಿಡಿಎ ಅಧಿಕಾರಿಗಳಿಂದಲೂ ಹಣಕ್ಕೆ ಬೇಡಿಕೆ ಇಡಲಾಗಿದೆ. ದಿಲ್ಲಿಗೆ ಈ ಹಣ ಕಳಿಸಬೇಕು, ಕೊನೆಪಕ್ಷ 250 ಕೋಟಿ ರೂಪಾಯಿ ಕಲೆಕ್ಷನ್ ಆಗಬೇಕು ಎಂದು ಅಧಿಕಾರಿಗಳ ಒಬ್ಬರು ಮಹಾನು ಭಾವರು ತಾಕೀತು ಮಾಡುತ್ತಾರೆ. ದುಡ್ಡು ಯಾರಿಗೆ ಸೇರಬೇಕು ಅವರ ಪಟ್ಟಿ ಕೊಡುತ್ತೇವೆ, ಅವರಿಗೆ ನೇರವಾಗಿ ದುಡ್ಡು ತಲುಪಿಸಿ ಎಂದು ಹೇಳುತ್ತಾರಂತೆ. ನಾನು ಯುರೋಪ್‌ನಲ್ಲಿ ಇದ್ದಾಗಲೇ ಈ ಬಗ್ಗೆ ಮಾಹಿತಿ ಬಂತು ಎಂದು ಮಾಜಿ ಮುಖ್ಯಮಂತ್ರಿ ಚಾಟಿ ಬೀಸಿದರು.

ಕಾಂಗ್ರೆಸ್ ಪಕ್ಷವು ಕರ್ನಾಟಕವನ್ನು ಈಸ್ಟ್ ಇಂಡಿಯಾ ಕಂಪನಿಯಂತೆ ಲೂಟಿ ಮಾಡುತ್ತಿದೆ. ಜನರಿಗೆ ಗ್ಯಾರಂಟಿ ತುಪ್ಪ ಸವರಿ ವರ್ಗಾವಣೆ ದಂಧೆಯಲ್ಲಿ ಕೊಳ್ಳೆ ಹೊಡೆಯುತ್ತಿದೆ. ಬೆಂಗಳೂರನ್ನು ಸಿಂಗಾಪುರ ಮಾಡುತ್ತೇವೆ ಎಂದು ಹೇಳಿದವರು ಇವತ್ತು ಇದೇ ಬೆಂಗಳೂರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಹೊರನೋಟಕ್ಕೆ ಭ್ರಷ್ಟಾಚಾರವನ್ನು ತೊಡೆದು ಹಾಕುವ ಮಾತು ಹೇಳುತ್ತಿದ್ದಾರೆ. ನಿಜಕ್ಕೆ ಕಾಂಗ್ರೆಸ್ ಪಕ್ಷಕ್ಕೆ ಅಂತಹ ಮನಃಸ್ಥಿತಿ ಇಲ್ಲ ಎಂದು ಹೆಚ್.ಡಿ.ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.

ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ವಸೂಲಿಗೆ ಆ ಪಕ್ಷ ಇರೋದು. ಈಸ್ಟ್ ಇಂಡಿಯಾ ಕಂಪನಿ ಇಡೀ ದೇಶವನ್ನು ಇವರಿಗೆ ಕೊಟ್ಟು ಹೋದರು. ಈಸ್ಟ್ ಇಂಡಿಯಾ ಕಂಪನಿಯ ವಸೂಲಿಯನ್ನು ಕಾಂಗ್ರೆಸ್ ಮುಂದುವರಿಸಿಕೊಂಡು ಬಂದಿದೆ. ಇಂಥವರು ಭ್ರಷ್ಟಾಚಾರ ನಿಲ್ಲಿಸ್ತಾರಾ? ಎಂದು ಅವರು ಪ್ರಶ್ನಿಸಿದರು.

**ಗೃಹ ಇಲಾಖೆಯಲ್ಲಿ ವೈಎಸ್ ಟಿ ಟ್ಯಾಕ್ಸ್ ದಂಧೆಕೋರರು:**

ಗೃಹ ಇಲಾಖೆಯಲ್ಲಿ ವರ್ಗಾವಣೆಯ ದಂಧೆ ಬಗ್ಗೆ ಕೇಳಿ ನನಗೆ ತೀವ್ರ ಆಘಾತ ಉಂಟಾಯಿತು. ಪೊಲೀಸರನ್ನು ಹೀಗೆ ಬಳಕೆ ಮಾಡಿಕೊಂಡರೆ ಕಾನೂನು ಸುವ್ಯವಸ್ಥೆ ಕಾಪಾಡುವ ಅವರು ಇನ್ನೇನು ಕೆಲಸ ಮಾಡುತ್ತಾರೆ? ಬ್ರಿಗೇಡ್ ರಸ್ತೆ ಸಮೀಪ ಇರುವ, ಗರುಡಾ ಮಾಲ್ ಹತ್ತಿರದ ಪೊಲೀಸ್ ಮೆಸ್ ನಲ್ಲಿ ನಡೆದ ಸಭೆಯಲ್ಲಿ ಯಾರೆಲ್ಲಾ ಇದ್ದರು? ವೈಎಸ್‌ಟಿ ಟ್ಯಾಕ್ಸ್ ಬಾಬ್ತುನವರು ಅಲ್ಲೇ ಇದ್ದರಲ್ಲವೇ? ಪೊಲೀಸ್ ವರ್ಗಾವಣೆ ಸಂಬಂಧ ನಡೆದ ಈ ಸಭೆಯಲ್ಲಿ ಮುಖ್ಯಮಂತ್ರಿಗಳು, ಗೃಹ ಸಚಿವರು, ಇಲಾಖೆಯ ಉನ್ನತ ಅಧಿಕಾರಿಗಳ ಜತೆಗೆ ಈ ವೈಎಸ್‌ಟಿ ಟ್ಯಾಕ್ಸ್ ಕುಳಗಳನ್ನು ಕೂರಿಸಿ ಕೊಂಡು ಚರ್ಚೆ ಮಾಡಿದ್ದೇಕೆ? ಪೊಲೀಸ್ ಇಲಾಖೆಯ ಸಭೆಯಲ್ಲಿ ಅವರಿಗೇನು ಕೆಲಸ? ಅವರನ್ನು ಒಳಕ್ಕೆ ಬಿಟ್ಟುಕೊಂಡವರು ಯಾರು? ಎಂದು ಕುಮಾರಸ್ವಾಮಿ ಅವರು ನೇರವಾಗಿ ಪ್ರಶ್ನಿಸಿದರು.

**ಭ್ರಷ್ಟಾಚಾರದ ರಿಪೋರ್ಟ್ ಕಾರ್ಡು ಕೊಡಲು ಹೋಗಿರಬೇಕು:**

36 ಜನ ಮಂತ್ರಿಗಳನ್ನು ದೆಹಲಿಗೆ ಕರೆದುಕೊಂಡು ಹೋಗಿದ್ದರು. ಅವರ ಹೈಕಮಾಂಡಿಗೆ ರಿಪೋರ್ಟ್ ಕಾರ್ಡು ಕೊಡೋದಕ್ಕೆ ಅವರು ಹೋಗಿದ್ದರಂತೆ. ಅವರು ರಿಪೋರ್ಟ್ ಕಾರ್ಡ್ ಇಡಬೇಕಿರುವುದು ರಾಜ್ಯದ ಆರೂವರೆ ಕೋಟಿ ಜನತೆಯ ಮುಂದೆ ಹೊರತು, ಹೈಕಮಾಂಡ್ ಮುಂದೆ ಅಲ್ಲ. ಈ ರಾಜ್ಯದ ಜನರು ವೋಟು ಹಾಕಿ ಇವರನ್ನು ಗೆಲ್ಲಿಸಿದ್ದಾರೆ. ನಾವೇನು ಮಾಡಿದ್ದೇವೆ, ಮಾಡುತ್ತೇವೆ ಎನ್ನುವ ವರದಿಯನ್ನು ಈ ಜನರ ಮುಂದೆ ಇಡಬೇಕು. ಇವರೇನು ಭ್ರಷ್ಟಾಚಾರದ ರಿಪೋರ್ಟ್ ಕಾರ್ಡು ಕೊಡಲು ಹೋಗಿರಬೇಕು ಎಂದು ಅವರು ತರಾಟೆಗೆ ತೆಗೆದುಕೊಂಡರು.

ಇವರು ಲೂಟಿ ಮಾಡುವುದಕ್ಕೆ ಖಜಾನೆ ಖಾಲಿ ಎಂದು ತೋರಿಸುವ ಹುನ್ನಾರ ನಡೆಸಿದ್ದಾರೆ. ಗ್ಯಾರಂಟಿ ಗೊಂದಲ ಮಾಡಿಕೊಂಡು, ವಿಧಾನಸಭೆ ಕ್ಷೇತ್ರಗಳಿಗೆ ಹಣ ಇಲ್ಲ ಎನ್ನುವ ಸಬೂಬು ಹೇಳುತ್ತಿದ್ದಾರೆ. ರಾಜ್ಯದಲ್ಲಿ ಹಣಕ್ಕೆ ಕೊರತೆ ಇಲ್ಲ. ಖಜಾನೆ ಸಮೃದ್ಧವಾಗಿದೆ. ಕಾಂಗ್ರೆಸ್ ಶಾಸಕರೇ ಅಭಿವೃದ್ಧಿಗೆ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ನನಗೆ ನಿಜಕ್ಕೂ ಆಶ್ಚರ್ಯ ಆಗುತ್ತಿದೆ ಎಂದು ಅವರು ಹೇಳಿದರು.

**ಹಣಕಾಸು ಬಗ್ಗೆ ಶ್ವೇತಪತ್ರ ಹೊರಡಿಸಿ:**

ಗ್ಯಾರಂಟಿಗಳಿಗೆ 20ರಿಂದ 25 ಸಾವಿರ ಕೋಟಿ ರೂಪಾಯಿ ಸಾಕು. ಕಳೆದ ವರ್ಷ 40,000 ಕೋಟಿ ರೂಪಾಯಿ ಹೆಚ್ಚುವರಿ ತೆರಿಗೆ ಆದಾಯ ಬಂದಿದೆ. ತೆರಿಗೆಯ ಎಲ್ಲಾ ಬಾಬ್ತುಗಳಲ್ಲಿ ನಿರೀಕ್ಷೆಗೂ ಮೀರಿ ತೆರಿಗೆ ಸಂಗ್ರಹ ಆಗಿದೆ. ಹಾಗಾದರೆ ಹದಿನಾಲ್ಕು ಬಜೆಟ್ ಮಂಡಿಸಿದ ಮಹಾನುಭಾವರು ಕೊರತೆ ಬಜೆಟ್ ಮಂಡಿಸಿದ್ದು ಯಾಕೆ? ಅದರ ಹಿಂದಿನ ಹುನ್ನಾರ ಏನು ಅವರು ಕೇಳಿದರು.

ರಾಜ್ಯದಲ್ಲಿ ಹಣದ ಕೊರತೆ ಇಲ್ಲ. ದೊಡ್ಡ ನಾಟಕ ನಡೆಯುತ್ತಿದೆ. ಒಂದು ಕಡೆ ಸಾಲ ಪ್ರಮಾಣ ಹೆಚ್ಚಳ ಮಾಡಿಕೊಂಡಿದ್ದಾರೆ, ಇನ್ನೊಂದು ತೆರಿಗೆ ಸಂಗ್ರಹದಲ್ಲಿ ಗುರಿ ಮೀರಿದ ಸಾಧನೆ ಆಗಿದೆ. ಕೇಂದ್ರ ಸರ್ಕಾರದಿಂದಲೂ ಯಾವುದೇ ಬಾಕಿ ಇಲ್ಲ. ನಾನು ಸಿಎಂ ಆಗಿದ್ದಾಗ ರೈತರ ಸಾಲ ಮನ್ನಾ ಮಾಡಲು 25,000 ಕೋಟಿ ರೂಪಾಯಿ ನೀಡಿದ್ದೆ. ಅಭಿವೃದ್ಧಿ ಎಲ್ಲೂ ನಿಲ್ಲಲಿಲ್ಲ, ಶಾಸಕರ ಅನುದಾನಕ್ಕೆ ಕೂಡ ಕತ್ತರಿ ಬೀಳಲಿಲ್ಲ. ಅವರ ಭಾಗ್ಯಗಳಿಗೂ ಹಣ ನೀಡಿದೆ. ಎಲ್ಲವನ್ನೂ ಜನರ ಮುಂದೆ ಇಡಿ. ನಿಮಗೆ ಧೈರ್ಯ ಇದ್ದರೆ ಶ್ವೇತಪತ್ರ ಹೊರಡಿಸಿ ಎಂದು ಮಾಜಿ ಮುಖ್ಯಮಂತ್ರಿ ಅವರು ಒತ್ತಾಯ ಮಾಡಿದರು.

**ಡಿಕೆಶಿಗೆ ಟಾಂಗ್ ಕೊಟ್ಟ ಮಾಜಿ ಮುಖ್ಯಮಂತ್ರಿ:**

ನಾನು ಪ್ರವಾಸ ಹೋಗಿದ್ದು ಯುರೋಪ್ ದೇಶಗಳಿಗೆ. ನನ್ನ ಕುಟುಂಬ ಸದಸ್ಯರು, ಸಹೋದರ, ಸಹೋದರಿಯರ ಜತೆ ತೆರಳಿದ್ದೆ. ಆದರೆ ಇಲ್ಲಿ ಕುಮಾರಸ್ವಾಮಿ ಅವರು ಸಿಂಗಾಪುರಕ್ಕೆ ಹೋಗಿ ಸರ್ಕಾರ ಕೆಡವಲು ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ವದಂತಿ ಹಬ್ಬಿಸಿದರು. ಇದು ನಮ್ಮ ರಾಜ್ಯದ ಬೇಹುಗಾರಿಕೆ ಇಲಾಖೆ ಕೆಲಸ ಮಾಡುತ್ತಿರುವ ರೀತಿ ಎಂದು ಕುಮಾರಸ್ವಾಮಿ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಕೇವಲ 19 ಕ್ಷೇತ್ರ ಗೆದ್ದಿರುವ ಕುಮಾರಸ್ವಾಮಿ ಬಗ್ಗೆ 136 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಭಯವಿದೆ. ಅವರಿಗೆ ಬಹುಮತ ಇದ್ದರೂ ಸುಸ್ಥಿರ ಸರ್ಕಾರ ನೀಡಲು ಸಾಧ್ಯವಿಲ್ಲ. ಅವರು ಅಭದ್ರತೆಯ ಭಾವದಿಂದ ಬಳಲುತ್ತಿದೆ ಎಂದು ಅವರು ಟೀಕಾಪ್ರಹಾರ ನಡೆಸಿದರು.

ಡಿ.ಕೆ. ಶಿವಕುಮಾರ್ ಅವರು ಯಾಕೆ ಈ ರೀತಿ ಹೇಳಿಕೆ ನೀಡಿದ್ದಾರೋ ಗೊತ್ತಿಲ್ಲ. ಅವರಿಗೆ ಈ ಸರ್ಕಾರ ಪೂರ್ಣಾವಧಿಗೆ ಇರುತ್ತದೆ ಎನ್ನುವ ನಂಬಿಕೆ ಇದ್ದಂತೆ ಇಲ್ಲ. ಅವರು ಹೆಚ್ಚಾಗಿ ಶಾಸ್ತ್ರ ಜ್ಯೋತಿಷ್ಯ ಕೇಳುತ್ತಾರೆ. ಜ್ಯೋತಿಷ್ಯದ ಮೂಲಕ ಚುನಾವಣೆಗಾಗಿ ಕೃತಕವಾದ ಶಕ್ತಿ ತುಂಬಿಕೊಂಡಿದ್ದಾರೆ. ಆ ಶಕ್ತಿ ಬಹಳ ದಿನ ಇರೋದಿಲ್ಲ ಅನ್ನುವುದು ಅವರಿಗೆ ತಲೆ ಒಳಗೆ ಇರಬಹುದು. ಅದಕ್ಕೆ ಅವರು ಈ ಹೇಳಿಕೆ ಕೊಟ್ಟಿರಬಹುದು ಎಂದು ಅವರು ಟಾಂಗ್ ಕೊಟ್ಟರು.

# ಕುಮಾರ ಸ್ವಾಮಿಯಿಂದ ವೃಥಾ ಆರೋಪ: ಮುಖ್ಯಮಂತ್ರಿ

ಬೆಂಗಳೂರು, ಆ.4- ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರದ್ದು ಯಾವಾಗಲೂ ಹಿಟ್ ಅಂಡ್ ರನ್ ಕೇಸು. ವೃಥಾ ಆರೋಪಗಳನ್ನು ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ ಕುಮಾರಸ್ವಾಮಿಯವರು ಇನ್ಸ್‌ಪೆಕ್ಟರ್ ವರ್ಗಾವಣೆ ವಿಚಾರದಲ್ಲಿ ವೈಎಸ್‌ಟಿ ಟ್ಯಾಕ್ಸ್ ಏಕೆ ಉಪಸ್ಥಿತರಿದ್ದರು ಎಂದು ಪ್ರಶ್ನಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಹಿಂದೆ ಪೆನ್‌ಡ್ರೈವ್ ತೋರಿಸಿದ್ದರು. ಅದನ್ನು ಸಾಬೀತು ಮಾಡಿದರೆ ಎಂದು ಪ್ರಶ್ನಿಸಿದ ಅವರು ಪೆನ್‌ಡ್ರೈವ್ ಇದ್ದರಲ್ಲವೇ ಹೊರಗೆಬಿಡುವುದು ಎಂದರು. ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡುವ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರದ ಜೊತೆ ಪಿಯೂಶ್ ಗೋಯಲ್ ಅವರೊಂದಿಗೆ ಮಾತನಾಡಿದ್ದು, ಅಕ್ಕಿ ನೀಡುವುದಿಲ್ಲ ಎಂದು ಹೇಳಿದ್ದು, ಈ ವಿಚಾರದಲ್ಲಿ ಅವರು ರಾಜಕೀಯ ಮಾಡಿದ್ದಾರೆ ಎಂದು ತಿಳಿಸಿದರು.

# ವಿಪಕ್ಷಗಳಿಗೆ ಹೈಕೋರ್ಟ್‌ನಿಂದ ನೋಟಿಸ್

(1ನೇ ಪುಟದಿಂದ) ನ್ಯಾಯಾಲಯ ಹೇಳಿದೆ.

ಗಿರೀಶ್ ಭಾರದ್ವಾಜ್ ಎಂಬುವವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ರಾಜಕೀಯ ಪಕ್ಷಗಳು ಐ.ಎನ್.ಡಿ.ಐ.ಎ. ಹೆಸರಿಟ್ಟುಕೊಳ್ಳುವುದನ್ನು ತಡೆಯಬೇಕು. ಈ ರಾಜಕೀಯ ಒಕ್ಕೂಟದ ಜೊತೆಗೆ ರಾಷ್ಟ್ರಧ್ವಜ ಬಳಸುವುದನ್ನು ತಡೆಯಬೇಕು ಎಂದು ಕೋರಿದ್ದರು.

ರಾಜಕೀಯ ಒಕ್ಕೂಟದ ಹೆಸರಿನ ಜೊತೆ ನಮ್ಮ ದೇಶದ ಹೆಸರನ್ನು ಸೇರಿಸಿರುವುದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ಅವರ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿದೆ. ಅವರು ಬಿಜೆಪಿ ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಮ್ಮ ದೇಶದ ಜೊತೆ ಸಂಘರ್ಷ ನಡೆಸುತ್ತಿದ್ದಾರೆ ಎಂದು ಬಿಂಬಿಸುತ್ತಿದ್ದಾರೆ ಎಂದು ಅರ್ಜಿದಾರರು ಹೇಳಿದ್ದರು.

2024ರ ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಜನಸಾಮಾನ್ಯರ ಮನಸ್ಸಿನಲ್ಲಿ ಗೊಂದಲ ಸೃಷ್ಟಿಸುವ ಪ್ರಯತ್ನ ನಡೆಸಲಾಗುತ್ತಿದೆ. ಈ ಚುನಾವಣೆಯು ರಾಜಕೀಯ ಪಕ್ಷಗಳು ಹಾಗೂ ನಮ್ಮ ದೇಶದ ನಡುವಿನ ಹೋರಾಟ ಎಂದು ಬಿಂಬಿಸಲಾಗುತ್ತಿದೆ. ದೇಶದ ಹೆಸರು ಬಳಸಿ ಅನಗತ್ಯ ಲಾಭ ಪಡೆಯುವ ಪ್ರಯತ್ನ ನಡೆಸಲಾಗುತ್ತಿದೆ ಎಂದವರು ತಿಳಿಸಿದ್ದರು.

ಈ ಬಗ್ಗೆ ಚುನಾವಣಾ ಆಯೋಗಕ್ಕೂ ಮನವಿ ಸಲ್ಲಿಸಲಾಗಿತ್ತು. ಆದರೆ, ಆಯೋಗ ಯಾವುದೇ ಕ್ರಮ ತೆಗೆದುಕೊಳ್ಳದ ಕಾರಣ ಹೈಕೋರ್ಟ್ ಮೊರೆ ಬಂದಿರುವುದಾಗಿ ಅರ್ಜಿದಾರರು ತಿಳಿಸಿದ್ದರು.

# ಐಐಎಂ ಮಸೂದೆಗೆ ಲೋಕಸಭೆ ಒಪ್ಪಿಗೆ

(1ನೇ ಪುಟದಿಂದ) ಐ.ಐ.ಎಂ.ಗಳ ಬಳಿಯೇ ಮುಂದುವರೆಯಲಿದೆ ಎಂದು ಪ್ರಧಾನ್ ಹೇಳಿದ್ದಾರೆ. ಮಸೂದೆಯ ಮೂಲಕ ಐ.ಐ.ಎಂ. ಕಾಯ್ದೆಗೆ ತಿದ್ದುಪಡಿ ತರಲಾಗುವುದು. ಆ ಮೂಲಕ ರಾಷ್ಟ್ರಪತಿ ಈ ಸಂಸ್ಥೆಗಳ ಅತಿಥಿಯಾಗಲಿದ್ದಾರೆ. ಅವರು ಸಂಸ್ಥೆಗಳ ಲೆಕ್ಕ ಪರಿಶೋಧನೆಗೆ ಅವಕಾಶ ಅಧಿಕಾರ ಪಡೆಯಲಿದ್ದಾರೆ. ಅವರು ತನಿಖೆಗೆ ಆದೇಶಿಸಬಹುದು ಹಾಗೂ ನಿರ್ದೇಶಕರನ್ನು ವಜಾಗೊಳಿಸಬಹುದು.

2018ರಲ್ಲಿ ಜಾರಿಗೆ ಬಂದಿದ್ದ ಐ.ಐ.ಎಂ. ಕಾಯ್ದೆಯ ಮೂಲಕ ಈ ಸಂಸ್ಥೆಗಳಿಗೆ ಹೆಚ್ಚಿನ ಸ್ವಾಯತ್ತತೆ ನೀಡಲಾಗಿತ್ತು. ಪ್ರತಿಯೊಂದು ಸಂಸ್ಥೆಯ ಆಡಳಿತ ಮಂಡಳಿಯಲ್ಲಿ 19 ಸದಸ್ಯರಿದ್ದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಲಾ ಒಬ್ಬರು ಪ್ರತಿನಿಧಿ ಹೊಂದಿರುತ್ತಿದ್ದರು. ಮಂಡಳಿಯು ಉಳಿದ 17 ಸದಸ್ಯರನ್ನು ಆಯ್ಕೆ ಮಾಡುತ್ತಿತ್ತು. ಇನ್ನು ಮುಂದೆ ಶೋಧನಾ ಸಮಿತಿಯ ಮೂಲಕ ನಿರ್ದೇಶಕರ ನೇಮಕ ಮಾಡಲಾಗುವುದು.

# ಲೋಪ ಅಳವಡಿಕೆ ತಡೆಯಲು ನಿರ್ಬಂಧ

(1ನೇ ಪುಟದಿಂದ) ಉದ್ಯಮಗಳ ಮಾಹಿತಿ ಭದ್ರತೆಗೆ ಧಕ್ಕೆಯಾಗಿದೆ ಎಂದೂ ಮೂಲಗಳು ತಿಳಿಸಿವೆ. ಆಮದಿನ ಮೇಲೆ ನಿಷೇಧ ಹೇರಿಲ್ಲ. ಕಂಪನಿಗಳು ಹಾಗೂ ವರ್ತಕರು ಡಿ.ಜಿ.ಎಫ್.ಟಿ. (ವಿದೇಶ ವ್ಯಾಪಾರ ಪ್ರಧಾನ ನಿರ್ದೇಶನಾಲಯ) ಮೂಲಕ ಸೂಕ್ತ ಅನುಮತಿ ಪಡೆದು ಆಮದು ಮಾಡಿ ಕೊಳ್ಳಬಹುದು ಎಂದು ಮೂಲಗಳು ಹೇಳಿವೆ.

ಡಿ.ಜಿ.ಎಫ್.ಟಿ. ಇದಕ್ಕಾಗಿ ಪೋರ್ಟಲ್ ಅನ್ನು ರೂಪಿಸಲಿದೆ. ಕಂಪನಿಗಳು ಹಾಗೂ ವರ್ತಕರು ಆನ್‌ಲೈನ್ ಮೂಲಕ ಅರ್ಜಿ ದಾಖಲಿಸಿ ಅನುಮತಿ ಪಡೆಯಬೇಕು. ಅಗತ್ಯ ಮಾಹಿತಿ ನೀಡಿದ ಮೂರ್ನಾಲ್ಕು ದಿನಗಳಲ್ಲಿ ಡಿ.ಜಿ.ಎಫ್.ಟಿ. ಅನುಮತಿ ನೀಡುವ ನಿರೀಕ್ಷೆ ಇದೆ.

# ಉಪನಾಮ : ರಾಹುಲ್ ಶಿಕ್ಷೆಗೆ ತಡೆ

(1ನೇ ಪುಟದಿಂದ) ಕಾರಣ ನೀಡಿಲ್ಲ ಎಂಬುದನ್ನೂ ಸುಪ್ರೀಂ ಕೋರ್ಟ್ ಪರಿಗಣಿಸಿದೆ. ರಾಹುಲ್ ಗಾಂಧಿ ನೀಡಿದ ಹೇಳಿಕೆಗಳು ಸದಭಿರುಚಿಯವಲ್ಲ. ಸಾರ್ವಜನಿಕ ಜೀವನದಲ್ಲಿ ಹೇಳಿಕೆ ನೀಡುವಾಗ ಎಚ್ಚರಿಕೆ ವಹಿಸಬೇಕು ಎಂಬ ನಿರೀಕ್ಷೆ ಇರುತ್ತದೆ. ಆದರೆ, ಈ ಮೇಲಿನ ಕಾರಣಗಳಿಂದಾಗಿ ಅಂತಿಮ ತೀರ್ಪಿನವರೆಗೆ ಶಿಕ್ಷೆ ತಡೆಯುವುದಾಗಿ ನ್ಯಾಯಾಲಯ ಹೇಳಿದೆ.

# ವಯಸ್ಸು ಇಳಿಸಲು ಸಮಿತಿ ಶಿಫಾರಸ್ಸು

(1ನೇ ಪುಟದಿಂದ) ಸಿಬ್ಬಂದಿ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ ಹೇಳಿದೆ. ರಾಜ್ಯ ವಿಧಾನಸಭೆಗಳಿಗೆ ಸ್ಪರ್ಧಿಸುವ ವಯಸ್ಸನ್ನೂ ಸಹ ಕಡಿಮೆ ಮಾಡಬೇಕಿದೆ ಎಂದು ಬಿಜೆಪಿಯ ಸುಶೀಲ್ ಮೋದಿ ನೇತೃತ್ವದ ಸಮಿತಿ ಹೇಳಿದೆ.

# ಮೊಹಲ್ಲ ಕ್ಲಿನಿಕ್ ಹೊಗಳಿ ಉಲ್ಟಾ ಹೊಡೆದ ಗುಂಡೂರಾವ್

ನವದೆಹಲಿ, ಆ. 4 - ದೆಹಲಿಯ ಆಮ್ ಆದ್ಮಿ ಸರ್ಕಾರ ನಡೆಸುತ್ತಿರುವ ಮೊಹಲ್ಲಾ ಕ್ಲಿನಿಕ್‌ಗಳನ್ನು ಮೊದಲು ಪ್ರಶಂಸಿಸಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೆಲವೇ ಗಂಟೆಗಳ ನಂತರ ಉಲ್ಟಾ ಹೊಡೆದಿದ್ದಾರೆ.

ಶುಕ್ರವಾರ ಅವರು ಇಲ್ಲಿನ ಪಂಚಶೀಲ ಪಾರ್ಕ್‌ನಲ್ಲಿರುವ ಮೊಹಲ್ಲಾ ಕ್ಲಿನಿಕ್‌ಗೆ ಭೇಟಿ ನೀಡಿದ್ದರು. ಈ ಸಂದರ್ಭದಲ್ಲಿ ಅವರ ಜೊತೆ ದೆಹಲಿ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಅವರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ್ದ ಗುಂಡೂರಾವ್, ಮೊಹಲ್ಲ ಕ್ಲಿನಿಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದಲ್ಲಿ 'ನಮ್ಮ ಕ್ಲಿನಿಕ್'ಗಳಿವೆ. ಇವುಗಳನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ನೋಡಲು ಬಯಸಿದ್ದೆ. ಮೊಹಲ್ಲ ಕ್ಲಿನಿಕ್‌ಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಜನರು ಮೆಚ್ಚಿಕೊಂಡಿದ್ದಾರೆ ಎಂದರು.

ಆದರೆ, ಕೆಲವೇ ಗಂಟೆಗಳ ನಂತರ ಉಲ್ಟಾ ಹೊಡೆದ ರಾವ್, ದೆಹಲಿಯ ಮೊಹಲ್ಲ ಕ್ಲಿನಿಕ್‌ಗಳನ್ನು ವೈಭವೀಕರಿಸಲಾಗುತ್ತಿದೆ. ಕ್ಲಿನಿಕ್‌ಗೆ ಭೇಟಿ ನೀಡಿದಾಗ ನಿರಾಸೆಯಾಯಿತು ಎಂದಿದ್ದಾರೆ.

# 3ನೇ ಎರಡರಷ್ಟು ಹಾದಿ ಕ್ರಮಿಸಿದ ಚಂದ್ರಯಾನ

(1ನೇ ಪುಟದಿಂದ) ಗಂಟೆಗೆ ಮತ್ತೊಂದು ಮಹತ್ವದ ಪ್ರಕ್ರಿಯೆ ಮೂಲಕ ಗಗನನೌಕೆಯನ್ನು ಚಂದ್ರನ ಕಕ್ಷೆಗೆ ಸೇರ್ಪಡೆ ಮಾಡಲಾಗುವುದು. ಚಂದ್ರಯಾನದ ಸ್ಥಿತಿ ಸಾಮಾನ್ಯವಾಗಿದೆ. ಆಗಸ್ಟ್ 23ರಂದು ಗಗನನೌಕೆಯನ್ನು ಚಂದ್ರನ ಮೇಲೆ ಇಳಿಸಲಾಗುವುದು ಎಂದು ಇಸ್ರೋ ತಿಳಿಸಿದೆ.

# ಅನ್ನಭಾಗ್ಯದ ದುರುಪಯೋಗ ವಿರುದ್ಧ ಕ್ರಮ

(1ನೇ ಪುಟದಿಂದ) ರಾಜ್ಯಗಳು ಅಕ್ಕಿ ನೀಡಲು ಮುಂದೆ ಬಂದಿವೆ. ಭಾರತೀಯ ಆಹಾರ ನಿಗಮ ನಿಗದಿಪಡಿಸಿರುವ ದರದಲ್ಲಿ ಅಕ್ಕಿ ನೀಡಿದರೆ ಪಡೆಯಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಆ ರಾಜ್ಯಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದ್ದು, ಇನ್ನೊಂದು ವಾರದಲ್ಲಿ ಅಂತಿಮ ರೂಪ ದೊರೆಯಲಿದೆ. ಹೀಗಾಗಿ ಸೆಪ್ಟೆಂಬರ್‌ನಿಂದ ಹಣದ ಬದಲು ತಲಾ 10 ಕೆ.ಜಿ.ಅಕ್ಕಿ ನೀಡಲಾಗುವುದು ಎಂದರು.

ರಾಜ್ಯದ 28 ಲಕ್ಷ ಕುಟುಂಬಗಳ ಪಡಿತರ ಚೀಟಿಗಳು ಆಧಾರ್ ಹಾಗೂ ಬ್ಯಾಂಕ್ ಖಾತೆ ಸಂಪರ್ಕ ಹೊಂದಿಲ್ಲ. ಜುಲೈನಲ್ಲಿ 170 ಕ್ಯಾಂಪ್ ಮಾಡಿ 119502 ಹೊಸ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದು ಸಚಿವರು ಹೇಳಿದರು.

ತುರ್ತು ವೈದ್ಯಕೀಯ ಕಾರಣಗಳಿಗೆ ಹೊಸ ಪಡಿತರ ಚೀಟಿ ನೀಡಲು ಅನುಮತಿ ನೀಡಲಾಗುವುದು. ಆಂಧ್ರಪ್ರದೇಶದಲ್ಲಿ ಆಹಾರಧಾನ್ಯ ಪಡೆಯುವವರಿಗೆ ಎ ಕಾರ್ಡ್, ವೈದ್ಯಕೀಯ ಚಿಕಿತ್ಸೆಗಾಗಿ ಬಿ ಕಾರ್ಡ್ ನೀಡಲಾಗುತ್ತಿದೆ ಎಂದು ತಿಳಿಸಿದರು. ಇಲಾಖೆ ಅಧಿಕಾರಿಗಳ ತಂಡ ಕಳುಹಿಸಿ ವರದಿ ಪಡೆದು ರಾಜ್ಯದಲ್ಲೂ ಅನುಷ್ಠಾನ ಮಾಡಲು ಕ್ರಮ ವಹಿಸಲಾಗುವುದು.

**ಬೆಂಬಲ ಬೆಲೆ ಹೆಚ್ಚಳಕ್ಕೆ ಮನವಿ :** ರಾಗಿ ಬೆಂಬಲ ಬೆಲೆ 5 ಸಾವಿರ ರೂ.ಗೆ ಹಾಗೂ ಜೋಳ ಬೆಂಬಲ ಬೆಲೆಯನ್ನು 4500 ರೂ.ಗೆ ಹೆಚ್ಚಿಸಲು ಕೇಂದ್ರ ಸಚಿವರನ್ನು ಕೋರಲಾಗಿದೆ. ಪಡಿತರ ವಿತರಣಾ ವ್ಯವಸ್ಥೆಯಡಿ ವಿತರಿಸಲು 8 ಲಕ್ಷ ಟನ್ ರಾಗಿ ಹಾಗೂ 3 ಲಕ್ಷ ಟನ್ ಜೋಳ ಖರೀದಿಸುವ ಬಗ್ಗೆ ಚರ್ಚೆ ನಡೆದಿದೆ ಎಂದರು.

ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ರಾಜ್ಯ ಸರ್ಕಾರ ನೀಡುವ 14 ಲಕ್ಷ ಬಿಪಿಎಲ್ ಪಡಿತರ ಚೀಟಿದಾರರಿಗೆ 20 ಲಕ್ಷ ಟನ್ ಆಹಾರಧಾನ್ಯ ಖರೀದಿಸುತ್ತಿರುವುದಾಗಿ ಅವರು ಹೇಳಿದರು.


**ಮೊಳಕೆ ಕಟ್ಟಿದ ಕಾಳುಗಳು ದೊರೆಯುತ್ತವೆ**
ಉಳ್ಳಿಕಾಳು, ಹೆಸರುಕಾಳು, ಮಡಿಕೆಕಾಳು, ಬಟಾಣಿಕಾಳು, ಕಡ್ಲೆಕಾಳು, ಕಾಬುಲ್ ಕಡ್ಲೆಕಾಳು, ಅಲಸಂದಿಕಾಳು, ಅವರೆಕಾಳು, ಪುರಿ ಪಾಕೆಟ್, ಪರೋಟ ಪಾಕೆಟ್, ಚಪಾತಿ, ರೊಟ್ಟಿ, ರಾಗಿ ಮುದ್ದೆ, ಉಪ್ಪಿನಕಾಯಿ, ಸಾಂಬಾರ್, ಪಲ್ಯಗಳು ದೊರೆಯುತ್ತವೆ. ಮಿನಾಕ್ಷಿ ಭವನ : ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ. ದೋಸೆ ಮಾಡುವ ಇಟ್ಟು, ಇಡ್ಲಿ ಮಾಡುವ ಇಟ್ಟು,ಪಡ್ಡು ಮಾಡುವ ಇಟ್ಟು ದೊರೆಯುತ್ತದೆ. ಸಿದ್ದವೀರಪ್ಪ ಬಡಾವಣೆ, ಬಿ.ಐ.ಇ.ಟಿ. ರಸ್ತೆ, ದಾವಣಗೆರೆ.
90601 72745

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆಗಳು ಮಾರಾಟಕ್ಕಿವೆ**
ಶಕ್ತಿ ನಗರ ಪಶ್ಚಿಮ 30x40, ಬನಶಂಕರಿ ಬಡಾವಣೆ ಪೂರ್ವ 30x40 (3 floor) ವಿದ್ಯಾನಗರ ಪಶ್ಚಿಮ 30x60 (3 floor) ತರಳಬಾಳು ಬಡಾವಣೆ 30x60 (ಡುಪ್ಲೆಕ್ಸ್) ಐಗೂರು ವಿಜಯಕುಮಾರ
99457 02495

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ 2ನೇ ಕ್ರಾಸ್, ಆರ್.ವಿ. ಪಬ್ಲಿಕ್ ಶಾಲೆ ರಸ್ತೆ, # 264 'ಕನಕ ಶ್ರೀ' ಅಪಾರ್ಟ್‌ಮೆಂಟ್ ನಲ್ಲಿ ಸುಸಜ್ಜಿತವಾದ ಕಾರ್ ಪಾರ್ಕಿಂಗ್, ಬೋರ್ ನೀರು, ನಲ್ಲಿ ನೀರು ಇರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ :
80958 99966, 98443 26096

**EC / ಇಸಿ, E-swathu, Khatha Change Building Licence & Other Property Documents**
96118-66449

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಸಮಯ: ಬೆಳಿಗ್ಗೆ 11 ರಿಂದ ಸಂಜೆ 7 ರ ವರೆಗೆ
63666 35593

**ಮನೆ ಬಾಡಿಗೆಗೆ / ಲೀಸ್‌ಗಿದೆ**
3 ಬೆಡ್ ರೂಂನ ಸುಸಜ್ಜಿತ ಉತ್ತರ ದಿಕ್ಕಿನ ಮೊದಲ ಮಹಡಿ ಮನೆ ಶ್ರೀನಿವಾಸನಗರ, 4ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ ಇಲ್ಲಿ ಬಾಡಿಗೆಗೆ/ಲೀಸ್ ಗಿದೆ. ಸಂಪರ್ಕಿಸಿ :
9972342941

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಉತ್ತರ 30x66 (40 ಅಡಿ ರಸ್ತೆ) ಪೂರ್ವ-ಉತ್ತರ ಕಾರ್ನರ್ 60x40, ದಕ್ಷಿಣ 40x60, ಡಾಲರ್ಸ್ ಕಾಲೋನಿ ದಕ್ಷಿಣ 30x35 (ಅಕ್ಕ-ಪಕ್ಕ) 30x70, 30x40, 40x40, 30x50. ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ : 98450-35710

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30x40, 30x40 East ಅಕ್ಕ-ಪಕ್ಕ, 30x50, 30x50 West ಅಕ್ಕ-ಪಕ್ಕ, 40x60 West, 50x80 West. ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು, ಮನೆಗಳು ಮಾರಾಟಕ್ಕೆ ಇವೆ**
ಡಾಲರ್ಸ್ ಕಾಲೋನಿ 30x50 ಉತ್ತರ S.S. 'A' Block 40x60, ಪಶ್ಚಿಮ MCC 'B' Block 40x60 ಪಶ್ಚಿಮ ಕುಂದವಾಡ ಮುಖ್ಯ ರಸ್ತೆ ಹತ್ತಿರ 30x45. ಏಜೆಂಟರು S ಯಲ್ಲೋಜಿರಾವ್
97418 11694

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ-ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**WANTED**
Mobile Shop work Experienced
Sale Executive-1
Office Work-1
Bhosle Telecome
Opp. Old Bustand & Smart Bazaar
98868 08412

**ಸೈಟ್ ಮಾರಾಟಕ್ಕಿದೆ**
ನಿಟುವಳ್ಳಿಯಿಂದ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ಹೋಗುವ 60 ಅಡಿ ಸಿಮೆಂಟ್ ರಸ್ತೆಯಲ್ಲಿ ಇರುವ ವಾಣಿಜ್ಯ ಉಪಯೋಗಕ್ಕೆ ಬರುವಂತಹ 38x89=3382 ಚ.ಅ. ಅಳತೆಯ ಸೈಟ್ ಮಾರಾಟಕ್ಕಿದೆ.
98453 82270

**ಖೈರಾ ಬ್ಯೂಟಿ ಪಾರ್ಲರ್ ಮತ್ತು ಸಲೂನ್‌ಗೆ**
ಕೆಲಸಕ್ಕೆ ಬ್ಯೂಟಿಷಿಯನ್ ಬೇಕಾಗಿದ್ದಾರೆ, ಸ್ಥಳ - ದಾವಣಗೆರೆ, ಸಂಬಳ - 5 ರಿಂದ 8 ಸಾವಿರ. ಸಂಪರ್ಕಿಸಿ :
77950 53904

**ವಾಣಿಜ್ಯ ಸ್ಥಳ ಬಾಡಿಗೆಗೆ**
1ನೇ ಮಹಡಿ, 400 ಚ. ಅಡಿ, 2ನೇ ಮಹಡಿ, 1200 ಚ. ಅಡಿ, ಕೋರ್ಟ್ ಸರ್ಕಲ್ ಹತ್ತಿರ (ಪಿಬಿ ರಸ್ತೆ) ಕುಂದುವಾಡ ರಸ್ತೆ, ದಾವಣಗೆರೆ. ಮಧ್ಯವರ್ತಿಗಳಿಗೆ ಪ್ರವೇಶವಿದೆ / ನೇರವಾಗಿ ಸಂಪರ್ಕಿಸಿ :
87468 12999

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಎ ಬ್ಲಾಕ್‌ನಲ್ಲಿ ಉತ್ತರ-30x50 ಪಶ್ಚಿಮ-30x40, ಬಿ ಬ್ಲಾಕ್‌ನಲ್ಲಿ ಪೂರ್ವ-30x50, 30x40, ಶ್ರೀಸಮಾನ್ಯದಲ್ಲಿ 3 ಸೈಟ್ ಉತ್ತರಕ್ಕೆ-30x40, 30x43 , ಕುಬೇರ ಹೋಟೆಲ್ ಹತ್ತಿರ, ಬೈಪಾಸ್ ಸರ್ವಿಸ್ ರಸ್ತೆಗೆ ದಕ್ಷಿಣ-30x55 ಕಮರ್ಷಿಯಲ್ ಸೈಟ್, ಎಂ.ಎಸ್. ಲೇಔಟ್‌ನಲ್ಲಿ ಪೂರ್ವ-30x56, ಜೆ.ಹೆಚ್. ಪಟೇಲ್ ನಗರದಲ್ಲಿ ಪಶ್ಚಿಮ-30x40 ಸೇಲ್‌ಡೀಡ್ ಆಗಿದೆ. ಸುರೇಶ್ ಪಿ.ಎಸ್. ಶಾಮನೂರು.
ಫೋ. : 84314 00907

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ ವಿನಾಯಕ ಬಡಾವಣೆಯಲ್ಲಿ 40x60 Corner, 30x60 West, 45x48 South, 33x40 South. ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮನೆ ಬಾಡಿಗೆ**
2BHK ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ. ಕಾಲೇಜು ರೋಡ್ ನಿಟ್ಟುವಳ್ಳಿ, ಶ್ರೀರಾಮ್ ಬಿಲ್ಡಿಂಗ್, ಶ್ರೀ ಸಾಯಿ ಗಾರ್ಮೆಂಟ್ಸ್ ಹತ್ತಿರ. ಸೈಟುಗಳು ಮಾರಾಟಕ್ಕಿವೆ ಸುಬ್ರಮಣ್ಯ ನಗರ, ಹೈಟೆಕ್ ಆಸ್ಪತ್ರೆ ಹತ್ತಿರ, ಪುನೀತ್ ಬಡಾವಣೆ ಪಶ್ಚಿಮ ಮುಖದ 30x50 ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ.
98443 04848

**ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು & ಮಹಿಳೆಯರು (Day & Night) ಕೆಲಸಕ್ಕೆ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ.
94807 77338, 94821 09492

**ಸೈಟ್ ಮಾರಾಟಕ್ಕಿದೆ**
ವಿದ್ಯಾನಗರದ ಮೇನ್ ರೋಡ್‌ನಲ್ಲಿ ಇರುವ ಶಿವಪಾರ್ವತಿ ದೇವಸ್ಥಾನದ ಪಕ್ಕದಲ್ಲಿರುವ 40 ಅಡಿ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x66 ಅಳತೆಯ ಸೈಟ್ ಮಾರಾಟಕ್ಕಿದೆ.
98453 82270

**ವಾಟರ್ ಪ್ರೂಫಿಂಗ್ (ನೀರಿನ ಲೀಕೇಜ್)**
ನಿಮ್ಮ ಮನೆಯ ಅಥವಾ ಕಟ್ಟಡಗಳ, ಮಹಡಿ, ಮೆಟ್ಟಿಲುಗಳು, ಬಾತ್ ರೂಂ, ಟೆರೆಸ್, ಸಂಪು, O.H ಟ್ಯಾಂಕ್, ಗೋಡೆಯ ಬಿರುಕು, ಕೀಟುಗಳ ಬಿರುಕು, ಕಿಟಕಿ, ಸಜ್ಜಾ, ಈಜುಕೊಳ, ಇತ್ಯಾದಿ ಯಾವುದೇ ರೀತಿಯ ನೀರಿನ ಲೀಕೇಜ್ ಆಗುತ್ತಿದ್ದರೆ, ನಮ್ಮನ್ನು ತಕ್ಷಣವೇ ಸಂಪರ್ಕಿಸಿ :
80955 09025
ಕೆಲಸ 100% ಗ್ಯಾರಂಟಿಯಿದೆ.

**WORK FROM HOME**
ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ವರ್ಕ್, ಸ್ಟೇಟಸ್ ಹಾಕುವ ವರ್ಕ್, ಆಫೀಸ್ ವರ್ಕ್ (ಪಾರ್ಟ್ ಟೈಮ್/ಫುಲ್ ಟೈಮ್) ವೇತನ - 5,000-15,000 ವಿದ್ಯಾರ್ಹತೆ SSLC Pass/Fail
63642 51791

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or any Degree. ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**ಜಮೀನುಗಳು ಮಾರಾಟಕ್ಕಿವೆ**
ಹರಿಹರದ ಬೈಪಾಸ್ ಹತ್ತಿರ 5 1/2 ಎಕರೆ ಮಾರಾಟಕ್ಕಿದೆ, ಲೋಕಿಕೆರೆ ಹತ್ತಿರ ಅಡಿಕೆ ತೋಟ ಮಾರಾಟಕ್ಕೆ ಇವೆ. ಏಜೆಂಟರು S ಯಲ್ಲೋಜಿರಾವ್
97418 11694

**Name Clarification**
I Panduranga Namadev S/O Late Vithoba Rao resident of 18, 11th Cross, 1st Block, AkshayaNagar, TC Palya Main Road, Near SBI Bank, Bengaluru 560016 want to inform that my name "Panduranga Namadev" and "Pandurang Namadeva" are both the same and refers to me only. The same has been sworn by me before Notary and signed dated on 4th Aug 2023 at Davanagere, Karnataka, India
Sd/- Panduranga Namadev

**ಮನೆ ಬಾಡಿಗೆಗೆ ಇದೆ**
ಗ್ರೌಂಡ್ ಫ್ಲೋರ್ ಪೂರ್ವ ಬಾಗಿಲು ಎರಡು ಬೆಡ್ ರೂಂ ಇಂಟೀರಿಯರ್ಸ್ ಆಗಿರುವ ಮನೆ ಬಾಡಿಗೆಗೆ ಇದೆ. ಬಾಲಾಜಿ ಲೇಔಟ್ ಕುಂದುವಾಡ ಕೆರೆ ಹತ್ತಿರ.
99861 46807

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. ಸ್ಥಳ : ದೊಡ್ಡಬಾತಿ
88920 08800

**WANTED**
1) Receptionist
2) Lab- Technologist
3) Marketing manager
Mitra Diagnostic Laboratory Davangere.
98443 26560, 76249 99271

**ಕೌಂಟರ್, ಟೇಬಲ್‌ಗಳು ಮಾರಾಟಕ್ಕಿವೆ**
ಕಿರಾಣಿ ಅಂಗಡಿಗೆ ಯೋಗ್ಯವಾದ ಕೌಂಟರ್ ಟೇಬಲ್‌ಗಳು, ರ್‍ಯಾಕರ್‌ಗಳು-2 ಮಾರಾಟಕ್ಕಿವೆ. ಕೂಡಲೇ ಸಂಪರ್ಕಿಸಿ : ರಘು ಸುತ್ರಾವೆ
96118 33092

**ನಮ್ಮಲ್ಲಿ ಅಡಮಾನದ ಲೋನ್ ಲಭ್ಯತೆ, ಮನೆ ಸಾಲ ಸೌಲಭ್ಯ**
ಮನೆ ಕಟ್ಟಲು, ಮನೆ ಖರೀದಿ ಮಾಡಲು ಬೇರೆ ಬ್ಯಾಂಕ್ ಅಥವಾ ಫೈನಾನ್ಸ್ ಕಂಪನಿಯಿಂದ ಇರುವ ಸಾಲ ತೀರುವಳಿ ಹಾಗೂ ಹೆಚ್ಚಿನ ಸಾಲ, ವಾಸದ ಮನೆ ಸಾಲ. (ಕಡಿಮೆ ದಾಖಲಾತಿ, ತ್ವರಿತ ಸಾಲ ಸೌಲಭ್ಯ)
77603 47247

**ಮನೆ ಮಾರಾಟಕ್ಕಿದೆ**
ಬಾಲಾಜಿ ಲೈಔಟ್ ಕುಂದುವಾಡ ಕೆರೆಯ ರಿಂಗ್ ರೋಡ್ ಹತ್ತಿರ 27x50 ಸೈಟ್‌ನಲ್ಲಿ ಕಟ್ಟಿರುವ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
70199 02022

**WANTED**
Accountants - 2 post
6 to 8 years Experience in Tally
Shamanur Sugar Ltd., 374, 4th main, P.J. extn, Davangere.
98441 20003

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.



ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ॥ ಎಚ್.ಆಯ್. ದೊಡ್ಡಮನಿ (G.R.No.8969) ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ರಕ್ತ ದಾನ ಶ್ರೇಷ್ಠ ದಾನ**

**PG-CET COACHING**
Start From : 07-08-2023
10:00 AM to 5:00PM
Classes By Experts
STUDY MATERIAL+ LAPTOP BAG
24X7 LIBRARY + WI-FI
MOCK-TEST + MENTORING
SAMRUDDHI COACHING ACADEMY DAVANAGERE
9620262361 / 8147262361

**ಸಿಂಚನ ಕೋಚಿಂಗ್ ಸೆಂಟರ್**
ಫೇಲಾದ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ
II PUC PCMB, Commerce, Arts,
100% ಫಲಿತಾಂಶ
ರಾಮ್ & ಕೊ ಸರ್ಕಲ್, ದಾವಣಗೆರೆ
8553278258, 8861445913

**ಅಡಿಕೆ ಮತ್ತು ತೆಂಗಿನ ಸಸಿಗಳು ಸಿಗುತ್ತವೆ**
ಉತ್ತಮ ಗುಣಮಟ್ಟದ ಅಡಿಕೆ ಮತ್ತು ತೆಂಗಿನ ಸಸಿಗಳು ಸಿಗುತ್ತವೆ.
99017 51913
ಬಸವರಾಜಪ್ಪ

**ಮನೆ ಬಾಡಿಗೆಗೆ**
2 BHK 2 ಮನೆ, 1ನೇ ಮಹಡಿ # 857 ತ್ರಿಶೂಲ್ ಟಾಕೀಸ್ ರಸ್ತೆ, ಶಿವಪ್ಪ ಸರ್ಕಲ್ ಹತ್ತಿರ, ಕೆ.ಬಿ. ಬಡಾವಣೆ, ದಾವಣಗೆರೆ - 577002. ಸಂಪರ್ಕಿಸಿ :
98440 19575, 83103 49615

**ಮಳಿಗೆ ಬಾಡಿಗೆಗಿದೆ**
ಎಂ.ಸಿ.ಸಿ. 'ಬಿ' ಬ್ಲಾಕ್, ಕುವೆಂಪು ನಗರ, 12ನೇ ಮೇನ್, 3ನೇ ಕ್ರಾಸ್‌ನಲ್ಲಿ 14x14 ಸೈಜಿನ ಮಳಿಗೆ ಬಾಡಿಗೆಗಿದೆ. ವಿಚಾರಿಸಿ.
ಫೋ. : 92421 24437

**ಸಿಂಚನ ಕೋಚಿಂಗ್ ಸೆಂಟರ್**
Failed Batches
II PUC PCMB, COMMERCE, ARTS
100% ಫಲಿತಾಂಶ,
ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
85532 78258
88614 45913

**ಗ್ಯಾಸ್ ಗೀಜರ್**
Fully Automatic
2990/- Rs.
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**URGENTLY WANTED**
Civil Engineers with 3-4 years Site Experience for a reputed firm
76768 45173

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಕನಿಷ್ಠ 2 ವರ್ಷದ ಅನುಭವ ಇರುವವರು 20 ರಿಂದ 25 ವರ್ಷದ ಯುವಕರು ಕೆಲಸಕ್ಕೆ ಬೇಕಾಗಿದ್ದಾರೆ, Bio-data ದೊಂದಿಗೆ ಸಂಪರ್ಕಿಸಿ.
89700 11711

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ದಾವಣಗೆರೆ.
89716 99826

**ಲೋನ್ ಕೊಡಲಾಗುತ್ತದೆ**
ಹೋಮ್ ಲೋನ್, ಬಿಸಿನೆಸ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಸಂಬಳ ಇರುವವರಿಗೆ ಪರ್ಸನಲ್ ಲೋನ್, ಕೊಡಲಾಗುವುದು,3 ಲಕ್ಷದಿಂದ 1 ಕೋಟಿ ವರೆಗೂ ಸಾಲ ಸೌಲಭ್ಯ, ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
74835 24662

**ಸಾಲ ಸೌಲಭ್ಯ**
✦ ಮನೆ ಕಟ್ಟಲು ✦ ಮನೆ ರಿಪೇರಿ ✦ ಸೈಟು ಖರೀದಿಸಲು ✦ ಬೇರೆ ಬ್ಯಾಂಕಿನ ಸಾಲ ತೀರಿಸಲು ✦ ಮನೆ ಮೇಲೆ ಸಾಲ ✦ ಸೈಟಿನ ಮೇಲೆ ಸಾಲ ✦ ಹಂಚಿನ ಮನೆಗೆ ✦ ಶೀಟಿನ ಮನೆಗೆ, ಡೋರ್ ನಂ. ಮತ್ತು ರೆವಿನ್ಯೂ ಪ್ರಾಪರ್ಟಿ ಮೇಲೆ ಸಾಲ.
63614 28175

# ತವರೂರ ಸೊಬಗಿನ ಪೌರ್ಣಮೆಯ ಚಿತ್ತ... ಅತ್ಯಮ್ಮನ ಸದನದತ್ತ...



ಕಳೆದ ನಾಲ್ಕು ವರ್ಷಗಳ ಹಿಂದೆ ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾ ಘಟಕವು ಅಸ್ತಿತ್ವಕ್ಕೆ ಬಂದು, ಶ್ರೀಮತಿ ವೀಣಾ ಕೃಷ್ಣಮೂರ್ತಿ ಅವರು ಜಿಲ್ಲಾಧ್ಯಕ್ಷರಾದ ಬಳಿಕ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ, ತಾವೂ ಕಾರ್ಯಶೀಲರಾಗಿ, ತಮ್ಮೊಟ್ಟಿಗೆ ಎಲ್ಲಾ ಸದಸ್ಯರುಗಳನ್ನು ಅರ್ಥಪೂರ್ಣವಾಗಿ ಸಂಘಟಿಸಿಕೊಂಡು ಮುನ್ನುಗ್ಗುತ್ತಿರುವುದು ಶ್ಲಾಘನೀಯ.

ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಘಟಕದ ನಾಲ್ಕನೇ ವಾರ್ಷಿಕೋತ್ಸವ ಮತ್ತು 'ಅತ್ಯಮ್ಮನ ಸದನ' 'ಕವನದಲ್ಲರಳಿದ ತಿನಿಸುಗಳು' ಕೃತಿಗಳ ಬಿಡುಗಡೆ ಸಮಾರಂಭವು ಇಂದು ಬೆಳಿಗ್ಗೆ 10.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಶಿವಮೊಗ್ಗದ ಕಮಲಾ ನೆಹರು ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಕಿರಣ್ ಆರ್.ದೇಸಾಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ, ಶಿವಮೊಗ್ಗದ ಕರ್ನಾಟಕ ಸಂಘದ ಪೂರ್ವಾಧ್ಯಕ್ಷರೂ, ಸಾಹಿತಿಗಳೂ ಆದ ಶ್ರೀಮತಿ ವಿಜಯ ಶ್ರೀಧರ್ ಅವರುಗಳು ಕೃತಿಗಳನ್ನು ಬಿಡುಗಡೆ ಮಾಡುವರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಆಶಯ ನುಡಿಗಳನ್ನಾಡುವರು. ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷರೂ, ಹಿರಿಯ ಸಾಹಿತಿಗಳೂ ಆದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸುವರು.

ನಮ್ಮ ಜಿಲ್ಲಾ ಲೇಖಕಿಯರ ಸಂಘ ಈಗಾಗಲೇ 15 ಲೇಖಕಿಯರನ್ನು ಒಳಗೊಂಡ ಹತ್ತು ಕವನಗಳ ಕವನ ಸಂಕಲನ 'ಪೌರ್ಣಮೆ' ಪ್ರಥಮ ಕೃತಿಯಾಗಿ ಹೊರತಂದಿದೆ. ಕಳೆದ ವರ್ಷ 20 ಲೇಖಕಿಯರ 'ತವರೂರ ಸೊಬಗು' ಕೃತಿಯನ್ನು ಲೋಕಾರ್ಪಣೆ ಮಾಡಿ ಕೆಲವೇ ದಿನಗಳಲ್ಲಿ ಈ ಕೃತಿಗೆ ಸಾಮಾಜಿಕ ಮನ್ನಣೆ ದೊರಕಿರುವುದು ಸಂತಸದ ವಿಷಯ.



**ನಗರದಲ್ಲಿ ಇಂದು ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾ ಘಟಕದ ವಾರ್ಷಿಕೋತ್ಸವ ಮತ್ತು ಕೃತಿಗಳ ಬಿಡುಗಡೆ ಸಮಾರಂಭ**

ನಮ್ಮ ಸಂಘದ ದಾವಣಗೆರೆ ಜಿಲ್ಲಾ ಶಾಖೆಯ 4ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ 24 ಲೇಖಕಿಯರಿಂದ ಲೇಖನಗಳನ್ನು ಸಂಪಾದಿಸಿ 'ಅತ್ಯಮ್ಮನ ಸದನ' ಎಂಬ ಶೀರ್ಷಿಕೆಯೊಂದಿಗೆ ಪ್ರಬಂಧ ಕೃತಿಯನ್ನು ಇಂದು ಲೋಕಾರ್ಪಣೆ ಮಾಡುತ್ತಿದೆ.

ಹೆಣ್ಣು ಸಣ್ಣಾಕಿ ಇರುವಾಗ, ತಂದೆ-ತಾಯಿ ಮಡಿಲಾಗ, ಅವಳ ಯೌವನೆಂಬ ಕಾಲ ಗಂಡನ ಪಾಲಾಗ, ಮುಂದೆ ಒಂದು ಮನೆಯ ಸಂಸ್ಕಾರ, ತಂದೆ-ತಾಯಿಯ ಸಂಸ್ಕೃತಿ, ಸಹೋದರ - ಸಹೋದರಿಯರ ಅಕ್ಕರೆ, ಬಾಲ್ಯದ ನೆನಪು ನಮ್ಮ ಜೀವನಕ್ಕೆ ಆಸರೆಯಾದರೆ, ಒಂದು ಹೆಣ್ಣಿಗೆ ಗಂಡನ ಮನೆ, ಅತ್ತೆ-ಮಾವಂದಿರಲ್ಲಿ ತಂದೆ-ತಾಯಿಯನ್ನು ಕಾಣುವ ಮನಸ್ಸು, ಭಾವ, ಮೈದುನರಲ್ಲಿ ಸಹೋದರತ್ವ ಕಾಣುವ ಕನಸು... ಇವು ಇನ್ನೊಂದೆಡೆ ಆಸರೆಯಾಗಿ ಸುಗಮ ಜೀವನಕ್ಕೆ ದಾರಿಯಾಗುತ್ತವೆ.

ಈ ನಿಟ್ಟಿನಲ್ಲಿ ತವರೂರ ಸೊಬಗು ಕೃತಿ ಪ್ರತಿಯೊಬ್ಬ ಮಹಿಳೆಯ ಜೀವನಕ್ಕೆ ಮುನ್ನುಡಿಯಾದರೆ, 'ಅತ್ಯಮ್ಮನ ಸದನ' ಕೃತಿ ಜೀವನಕ್ಕೆ ನಾಂದಿ ಹಾಡುವಲ್ಲಿ ಸಂಶಯವೇ ಇಲ್ಲ. ಸ್ತ್ರೀ ಸಂಕುಲಕ್ಕೆ ಇವು ಆದರ್ಶಪ್ರಾಯ.

ಈ ಕೃತಿಯಲ್ಲಿ ಬರುವ ಎಲ್ಲಾ ಲೇಖನಗಳು ಪ್ರತಿಯೊಬ್ಬ ಓದುಗರಿಂದ ಮನ್ನಣೆ ಪಡೆದು ಹೆಸರು ಪಡೆಯಲಿ; ದಾವಣಗೆರೆ ಜಿಲ್ಲಾ ಲೇಖಕಿಯರ ಸಂಘದ ಹೆಸರು ನಾಡಿನ ಎಲ್ಲರ ಗಮನ ಸೆಳೆಯುವಂತಾಗಲಿ; ಲೇಖಕಿಯರೆಲ್ಲರ ಶ್ರಮಕ್ಕೆ ನಮ್ಮ ಸಂಘ ಕೈಗೊಳ್ಳಬಹುದಾದ ಎಲ್ಲಾ ಕಾರ್ಯ ಚಟುವಟಿಕೆಗಳಿಗೂ ಕನ್ನಡ ತಾಯಿ ಶ್ರೀ ಭುವನೇಶ್ವರಿ ಆಶೀರ್ವದಿಸಲಿ ಎಂದು ಪ್ರಾರ್ಥಿಸುತ್ತಾ ಸಾಹಿತ್ಯಾಸಕ್ತರು ಈ ಸಮಾರಂಭಕ್ಕೆ ಆಗಮಿಸಿ ಹರಸಿ... ಹಾರೈಸಿ..



**- ಡಾ. ಅನಿತಾ ಹೆಚ್. ದೊಡ್ಡ ಗೌಡರ್,**
ದಾವಣಗೆರೆ, 9902198655

# ರಾಹುಲ್ ಪ್ರಕರಣಕ್ಕೆ ಸುಪ್ರೀಂ ತಡೆ: ಎಸ್ಸೆಸ್, ಎಸ್ಸೆಸ್ಸೆಂ ಸಂತಸ

ದಾವಣಗೆರೆ, ಆ 4 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ದದ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸುಪ್ರೀಂಕೋರ್ಟ್ ಹೈಕೋರ್ಟ್ ತಡೆ ನೀಡಿರುವುದಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಸಂತಸ ವ್ಯಕ್ತಪಡಿಸಿದ್ದಾರೆ.

ಸುಪ್ರೀಂಕೋರ್ಟ್ ಈ ತೀರ್ಪಿನಿಂದ ಸತ್ಯಕ್ಕೆ ನ್ಯಾಯ ಸಿಕ್ಕಂತಾಗಿದೆ ಎಂದಿರುವ ಅವರು, ಕೇರಳದ ವೈಯನಾಡು ಲೋಕಸಭೆ ಕ್ಷೇತ್ರದ ಸಂಸದರಾಗಿ ಮುಂದುವರಿಯಲಿದ್ದು, ಕೇಂದ್ರದ ಬಿಜೆಪಿ ಸರ್ಕಾರದ ಭ್ರಷ್ಟಾಚಾರವನ್ನು ಎಳೆ-ಎಳೆಯಾಗಿ ದೇಶದ ಜನತೆಯ ಗಮನಕ್ಕೆ ತರಲಿದ್ದಾರೆ ಎಂದು ತಿಳಿಸಿದ್ದಾರೆ.

ಒಂದಲ್ಲಾ ಒಂದು ದಿನ ಸತ್ಯಕ್ಕೆ ಗೆಲುವು ಸಿಕ್ಕೆ ಸಿಗುತ್ತೆ, ಇವತ್ತಲ್ಲದಿದ್ದರೆ ನಾಳೆ ಅಥವಾ ನಾಡಿದ್ದು ಜಯ ಸಿಗುತ್ತದೆ. ರಾಹುಲ್ ಗಾಂಧಿ ಅವರ ಹಾದಿ ಸ್ಪಷ್ಟವಾಗಿದ್ದು, ಸತ್ಯಕ್ಕೆ ನ್ಯಾಯಾಲಯ ಬೆಂಬಲ ನೀಡಿದೆ.,

ನ್ಯಾಯಾಲಯಕ್ಕೆ ಧನ್ಯವಾದ ಸಲ್ಲಿಸಿದ್ದು, ಇದು ಪ್ರಜಾಪ್ರಭುತ್ವದ ಗೆಲುವು, ಸತ್ಯ ಮೇವ ಜಯತೇ ಎಂದು ಬಣ್ಣಿಸಿದ್ದಾರೆ.

# ನಾಳೆ ಸುನಂದ ದುರುಗೇಶ್ ಅವರ 'ನೆನಪು ನಿರಂತರ' ಕಾರ್ಯಕ್ರಮ



ದಾವಣಗೆರೆ, ಆ. 4- ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾಗಿದ್ದ ವಿಚಾರವಾದಿ, ಆಂದೋಲನಗಾರ್ತಿ ಶ್ರೀಮತಿ ಸುನಂದ ದುರುಗೇಶ್ ಅವರ 'ನೆನಪು ನಿರಂತರ' ಕಾರ್ಯಕ್ರಮವು ನಾಡಿದ್ದು ದಿನಾಂಕ 6 ರಂದು ಬೆಳಿಗ್ಗೆ 10.30 ಕ್ಕೆ ನಗರದ ಕೆ.ಇ.ಬಿ. ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಚಳವಳಿ ಹೋರಾಟಗಾರ ನಾಗೇಂದ್ರ ಬಂಡೀಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಹಿಮಾಚಲ ಪ್ರದೇಶದ ವಿಶ್ರಾಂತ ಮುಖ್ಯ ನ್ಯಾಯಾಧೀಶರಾದ ಎಲ್. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಮಾಜಿ ಸಚಿವ ಹೆಚ್. ಆಂಜನೇಯ, ಚಿತ್ರದುರ್ಗ ನವಯಾನ ಬುದ್ಧ ದಮ್ಮ ಉಪಾಸಕ ಪ್ರೊ.ಸಿ.ಕೆ.ಮಹೇಶ್ವರಪ್ಪ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ವಕೀಲರೂ, ಸುನಂದ ಅವರ ಪತಿ ದುರುಗೇಶ್ ಗುಡಿಗೇರಿ, ಸಹೋದರ ನಾಗೇಂದ್ರ ಹಾವೇರಿ, ವಕೀಲರಾದ ಕೆ.ಜಿ.ಕೆ. ಸ್ವಾಮಿ, ಮಹಾವೀರ ಜೈನ್ ಸಂಘವಿ, ಹೆಚ್.ಎನ್. ಸುಧಾ, ಹುಲಿಗೇಶ್, ಮಂಜುನಾಥ್ ಉಪಸ್ಥಿತರಿದ್ದರು.

# ಸೆ.9 ಕ್ಕೆ ರಾಷ್ಟ್ರೀಯ ಲೋಕ್ ಅದಾಲತ್

ದಾವಣಗೆರೆ, ಆ.4- ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ವತಿಯಿಂದ ದಾವಣಗೆರೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಸೆಪ್ಟಂಬರ್ 9 ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ.

ಸಾರ್ವಜನಿಕರು ಈ ಲೋಕ್ ಅದಾಲತ್‌ನಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಹಾಗೂ ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳು, ಮೋಟರ್ ವಾಹನ ಅಪಘಾತ ಪರಿಹಾರ ಕ್ರಮಗಳು, ಚೆಕ್ ಅಮಾನ್ಯ ಪ್ರಕರಣಗಳು, ಭೂ ಸ್ವಾಧೀನ ಪ್ರಕರಣಗಳು, ಬ್ಯಾಂಕ್ ಸಾಲ, ಎಂ.ಎಂ.ಡಿ.ಆರ್ ಕಾಯ್ದೆಯಡಿಯ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬಹುದು.

ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು (ವಿಚ್ಛೇಧನ ಹೊರತುಪಡಿಸಿ) ಪಿಂಚಣಿ, ವೇತನ ಭತ್ಯೆ, ವಿದ್ಯುತ್ ಹಾಗೂ ನೀರಿನ ಶುಲ್ಕ, ಕೈಗಾರಿಕೆ ಕಾರ್ಮಿಕರ ವೇತನ, ಕಾರ್ಮಿಕ ವಿವಾದದ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು.

ಮಾಹಿತಿಗಾಗಿ ದಾವಣಗೆರೆ ಹಳೆಯ ನ್ಯಾಯಾಲಯ ಸಂಕೀರ್ಣದಲ್ಲಿರುವ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ದೂ.08192296364, ತಾಲ್ಲೂಕು ಕಾನೂನು ಸೇವಾ ಸಮಿತಿ ಹರಿಹರ ದೂ.08192296885, ಹೊನ್ನಾಳಿ ದೂ.08188251732, ಚನ್ನಗಿರಿ ದೂ.08189229195 ಮತ್ತು ಜಗಳೂರು ದೂ.08196227600ಗೆ ಸಂಪರ್ಕಿಸಬಹುದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ ಕರಣ್ಣವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಓದುಗರ ಪತ್ರ

### ರೈಲಿನಲ್ಲಿ ಇರಲಿ ಸ್ಥಳ ಸೂಚನಾ ಫಲಕ

**ಮಾನ್ಯರೇ,**

ದೇಶದಲ್ಲಿ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ರೈಲುಗಳು ಪ್ರಯಾಣಿಕರನ್ನು ಹೊತ್ತು ಸಂಚರಿಸುತ್ತವೆ. ಇದೊಂದು ರೀತಿ ಜನಸ್ನೇಹಿ ಸಾರಿಗೆ ವ್ಯವಸ್ಥೆ, ಆದರೆ ನಮ್ಮ ರೈಲ್ವೆಗೆ ಆಧುನಿಕ ಸ್ಪರ್ಶ ಬೇಕಾಗಿದೆ. ರಾತ್ರಿ ಹೊತ್ತು ಪ್ರಯಾಣಿಕರು ತಾವು ಎಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಸಾಧ್ಯವಾಗದೆ, ಇಳಿಯಬೇಕಾದ ನಿಲ್ದಾಣಕ್ಕೆ ಬದಲಾಗಿ ಹಿಂದಿನ ಅಥವಾ ಮುಂದಿನ ನಿಲ್ದಾಣಗಳಲ್ಲಿ ಇಳಿದ ಉದಾಹರಣೆಗಳು ಬಹಳಷ್ಟಿವೆ.

ರೈಲ್ವೆ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸಬೇಕು. ರೈಲಿನ ಒಳಗೆ ನಿಲ್ದಾಣಗಳ ಹೆಸರು ತೋರಿಸುವ ಎಲ್‌ಇಡಿ ಫಲಕಗಳನ್ನು ಅಳವಡಿಸುವ ಅಥವಾ ನಿಲ್ದಾಣದ ಹೆಸರಿನ ಮುದ್ರಿತ ಧ್ವನಿ ಕೇಳಿಸುವ ವ್ಯವಸ್ಥೆ ಮಾಡಬೇಕು. ಇದರಿಂದ, ನಿದ್ರೆಗೆ ಜಾರಿದ ಪ್ರಯಾಣಿಕರಿಗೆ ಹಾಗೂ ತಾವು ಯಾವ ನಿಲ್ದಾಣದಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳಲು ಬಯಸುವವರಿಗೆ ಅನುಕೂಲವಾಗುತ್ತದೆ.

**- ರೋಹಿತ್ ಎಸ್. ಜೈನ್,** ಕಾರ್ಯದರ್ಶಿ
ನೈಋತ್ಯ ರೈಲ್ವೆ ಪ್ರಯಾಣಿಕರ ಸಂಘ, ದಾವಣಗೆರೆ.

### ಯಾವುದು ಸರಿ ಶೀರ್ಷಿಕೆ !?

**ಮಾನ್ಯರೇ,**

ನಮ್ಮರಾಜ್ಯದಲ್ಲಿ ಮೊದಲುಮುಖ್ಯ ಕಂದಾಯ ವಿಭಾಗಗಳಿರುವ ಬೆಂಗಳೂರು, ಮಂಗಳೂರು, ಗುಲ್ಬರ್ಗ ಮತ್ತು ಬೆಳಗಾವಿ ಮಹಾನಗರಗಳಲ್ಲಿ ಮಾತ್ರ ವಿಶ್ವ ವಿದ್ಯಾನಿಲಯಗಳು ಇರುತ್ತಿದ್ದವು. ಆದರೆ ಶಿಕ್ಷಣವು ವ್ಯಾಪಾರೀಕರಣಗೊಳ್ಳುತ್ತಿರುವ ಇತ್ತೀಚಿನ ವರ್ಷಗಳಲ್ಲಿ ಅವು ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವುದೇನೋ ಸರಿ, ಆದರೆ ಹಲವು ಕಡೆ 'ವಿಶ್ವವಿದ್ಯಾನಿಲಯ' ಹಾಗೂ ಕೆಲವು ಕಡೆ 'ವಿಶ್ವವಿದ್ಯಾಲಯ' ಎಂದು ಹೆಸರುಗಳಿರುವುದು ಜನ ಸಾಮಾನ್ಯರಿಗೆ ಗೊಂದಲ ಉಂಟುಮಾಡುತ್ತಿದೆ. ಶಿಕ್ಷಣ ಸಂಸ್ಥೆಗಳೇ ಹೀಗೆ ದ್ವಂದ್ವ ನಾಮಾವಳಿಗಳ ಫಲಕಗಳನ್ನು ಬರೆಸಿಕೊಂಡಿರುವುದು ಎಷ್ಟು ಸರಿ ?

ಅದೇ ರೀತಿ ಮಂತ್ರಾಲಯ, ಸಚಿವಾಲಯ, ಗ್ರಂಥಾಲಯ, ದೇವಾಲಯ, ಶಿವಾಲಯ, ಹೀಗೆ ಶಬ್ದಗಳ ಬಳ್ಳಿ ಕುಡಿಯೊಡೆದರೆ ನಾವು ಯಾವ ಕನ್ನಡ ಪದಕೋಶದಲ್ಲಿ ಹುಡುಕಬೇಕಿದೆ ? ಈ ಹಿಂದೆ ಜನಪ್ರಿಯ ಮಾಜಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ , ವಾಜಪಾಯ್ , ವಾಜಪೈ, ವಾಜಪಾಯೀ, ಎಂದೆಲ್ಲಾ ಅಲ್ಲಲ್ಲಿ ಕೇಳಿ ಬರುತ್ತಿದ್ದವು. ಹೀಗೆ ಭಾಷೆ ಮತ್ತು ಉಚ್ಚಾರಗಳ ಬಳಕೆ ಸಂದರ್ಭದಲ್ಲಿ ದ್ವಂದ್ವ ಮತ್ತು ಗೊಂದಲಗಳ ನೀತಿ ಏಕೆ ?

**- ಜೆ. ಎಸ್. ಚಂದ್ರನಾಥ,** ನೀಲಾನಹಳ್ಳಿ, 8296522692

# ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ ಇಂದಿನಿಂದ ಸಿಲ್ವರ್ ಶೋ




**ಗ್ರಾಹಕರಾದ ಪ್ರತಿಭಾ, ಶಶಿಕಲಾ ಚಾಲನೆ**

ದಾವಣಗೆರೆ, ಆ.4- ವಿಶ್ವದ ಅತಿದೊಡ್ಡ ಚಿನ್ನ ಮತ್ತು ವಜ್ರದ ರೀಟೇಲ್ ಜಾಲಗಳಲ್ಲಿ ಒಂದಾಗಿ ರುವ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಕರ್ನಾಟಕದ ದಾವಣಗೆರೆ ಶೋರೂಂನಲ್ಲಿ ಸಿಲ್ವರ್ ಶೋಗೆ ಗ್ರಾಹಕರಾದ ಪ್ರತಿಭಾ ಮತ್ತು ಶಶಿಕಲಾ ಅವರುಗಳು ಚಾಲನೆ ನೀಡಿದರು.

ಹೊಚ್ಚ ಹೊಸದಾದ ಬೆಳ್ಳಿಯ ಆಭರಣ ಮತ್ತಿ ತರೆ ಉತ್ಪನ್ನಗಳ ಪ್ರದರ್ಶನವನ್ನು ಆಯೋಜಿಸುತ್ತಿದೆ. ಆಗಸ್ಟ್ 13 ರವರೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ ಬೆಳ್ಳಿಯ ಆಭರಣಗಳು ಮತ್ತು ಇತರೆ ಉತ್ಪನ್ನಗಳನ್ನು ಪ್ರದರ್ಶಿಸುತ್ತಿವೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮುಖ್ಯಸ್ಥರಾದ ಬೆಸಿಲ್‌ರಾಜನ್ ಮತ್ತು ಗ್ರಾಹಕರು ಉಪಸ್ಥಿತರಿದ್ದರು. ತನ್ನ ಗ್ರಾಹಕರಿಗೆ 10 ಮಲಬಾರ್ ಭರವಸೆಗಳನ್ನು ನೀಡುತ್ತಿದೆ. ಇದರಲ್ಲಿ ಪ್ರಮುಖ ವಾಗಿ ಪಾರದರ್ಶಕ ದರ ಪಟ್ಟಿ, ಸ್ಟೋನ್‌ನ ನಿಖರ ತೂಕ, ನಿವ್ವಳ ತೂಕ, ಆಭರಣದ ಸ್ಟೋನ್ ದರ, ಆಭರಣಕ್ಕೆ ಭರವಸೆಯ ಜೀವನಪೂರ್ತಿ ನಿರ್ವಹಣೆ, ಹಳೆಯ ಚಿನ್ನಕ್ಕೆ ಶೇ.100 ರಷ್ಟು ಮೌಲ್ಯ, ಶೇ.100 ಹೆಚ್.ಯು.ಐ.ಡಿ ಅನುಸರಣೆಯ ಚಿನ್ನ ಶುದ್ಧತೆಯ ಪ್ರಮಾಣೀಕರಣ, ಐಜಿಐ ಮತ್ತು ಜಿಐಎ ಪ್ರಮಾಣೀಕರಣ ಸೇರಿದಂತೆ 28 ಪಾಯಿಂಟ್‌ಗಳ ಗುಣಮಟ್ಟ ಪರೀಕ್ಷೆ, ಬೈಬ್ಯಾಕ್ ಗ್ಯಾರಂಟಿ, ಜವಾಬ್ದಾರಿಯುತ ಮೂಲ ಮತ್ತು ನ್ಯಾಯಯುತ ಕಾರ್ಮಿಕ ಪದ್ಧತಿಗಳು ಸೇರಿವೆ. ಮಲಬಾರ್ ನ್ಯಾಯಯುತ ದರ ಭರವಸೆಯು ಶೇ.4.9 ರಿಂದ ಆರಂಭವಾಗಲಿದ್ದು, ಇದು ಅತ್ಯಂತ ಕಡಿಮೆ ಆಭರಣಗಳ ಮೇಕಿಂಗ್ ಚಾರ್ಜ್ ಆಗಿದೆ.

ಗ್ರೂಪ್‌ನ ಸಿಎಸ್‌ಆರ್ ಉಪಕ್ರಮದ ಭಾಗವಾಗಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ತನ್ನ ಈ ಸ್ಟೋರ್‌ನ ಲಾಭಾಂಶದಲ್ಲಿ ಶೇ.5 ರಷ್ಟನ್ನು ಚಾರಿಟೇಬಲ್ ಮತ್ತು ಜನೋಪಕಾರಿ ಚಟುವಟಿಕೆಗಳಿಗೆ ಕೊಡುಗೆ ನೀಡಲಿದೆ.

# ದಾವಣಗೆರೆ ವಿವಿಯಲ್ಲಿ ಇಂದು ಪತ್ರಕರ್ತರಿಗಾಗಿ ಇಂದು ಕಾರ್ಯಾಗಾರ

ದಾವಣಗೆರೆ ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ ವತಿಯಿಂದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಘಟಕಗಳು ಹಾಗೂ ಜಿಲ್ಲಾ ವರದಿಗಾರರ ಕೂಟದ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಪತ್ರಿಕಾ ದಿನಾಚರಣೆ ಮತ್ತು ಡಿಜಿಟಲ್ ಯುಗದಲ್ಲಿ ಪತ್ರಕರ್ತರ ಭವಿಷ್ಯ ಕುರಿತು ಪತ್ರಕರ್ತರಿಗಾಗಿ ಕಾರ್ಯಾಗಾರ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರ, ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಭಾಗವಹಿಸಲಿದ್ದಾರೆ. ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಲಿದ್ದಾರೆ.

ಕುಲಸಚಿವರಾದ ಸರೋಜ ಬಿ.ಬಿ., ಪರೀಕ್ಷಾಂಗ ಕುಲಸಚಿವ ಡಾ.ಕೆ.ಶಿವಶಂಕರ, ಹಣಕಾಸು ಅಧಿಕಾರಿ ಪ್ರೊ. ಆರ್. ಶಶಿಧರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ ಇ. ಎಂ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಚಿತ್ರದುರ್ಗ ಜಿಲ್ಲಾ ಘಟಕದ ಅಧ್ಯಕ್ಷ ಬಿ.ದಿನೇಶ ಗೌಡಗೆರೆ, ಪ್ರಧಾನ ಕಾರ್ಯದರ್ಶಿ ಎಸ್. ಸಿದ್ಧರಾಜು, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ ಡಾ.ಸಿ.ವರದರಾಜ ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ಏಕರೂಪ ನಾಗರಿಕ ಸಂಹಿತೆ ಸಂವಾದ

ರೋಟರಿ ಭಾನಭವನದಲ್ಲಿ ಇಂದು ಸಂಜೆ 5 ಗಂಟೆಗೆ 'ಏಕರೂಪ ನಾಗರಿಕ ಸಂಹಿತೆ' ಸಂವಾದ ಏರ್ಪಡಿಸಲಾಗಿದೆ. ಅಧ್ಯಕ್ಷತೆಯನ್ನು ಹಿರಿಯ ವಕೀಲ, ಅಧಿವಕ್ತಾ ಪರಿಷತ್‌ನ ಜಿಲ್ಲಾ ಅಧ್ಯಕ್ಷ ಎಲ್. ದಯಾನಂದ್ ವಹಿಸುವರು. ಕಾರ್ಯಕ್ರಮವನ್ನು ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ಉದ್ಘಾಟಿಸುವರು. ಸಂಪನ್ಮೂಲ ವ್ಯಕ್ತಿಯಾಗಿ ಹಿರಿಯ ವಕೀಲರೂ ಆದ ಅಧಿವಕ್ತಾ ಪರಿಷತ್‌ನ ಕಾರ್ಯದರ್ಶಿ ಲಕ್ಷ್ಮಿನಾರಾಯಣ ಎನ್.ಹೆಗಡೆ ಆಗಮಿಸುವರು. ಕಾರ್ಯಕ್ರಮದಲ್ಲಿ ಹಿರಿಯ ವಕೀಲರುಗಳಾದ ಡಿ.ಎನ್. ಬಸವರಾಜ್, ಮಂಜುನಾಥ ದೊಡ್ಡಮನಿ ಉಪಸ್ಥಿತರಿರುವರು. ಸಂವಾದವು ಅಧಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ (ದಾವಣಗೆರೆ ವಿಭಾಗ), ಹರಿಹರ, ದಾವಣಗೆರೆ ತಾಲ್ಲೂಕು ಅಧಿವಕ್ತಾ ಪರಿಷತ್ ಘಟಕದ ಸಂಯುಕ್ತಾಶ್ರಯದಲ್ಲಿ ನಡೆಯಲಿದೆ.

# ನಗರದಲ್ಲಿ ಇಂದು ಹಡಪದ ಅಪ್ಪಣ್ಣನವರ ಜಯಂತ್ಯೋತ್ಸವ



ನಿಜಶರಣ, ನಿಜಸುಖಿ ಹಡಪದ ಅಪ್ಪಣ್ಣನವರ 889ನೇ ಜಯಂತೋತ್ಸವ ಇಂದು ಬೆಳಗ್ಗೆ 11 ಗಂಟೆಗೆ ಆನಗೋಡು ಗ್ರಾಮದ ಬಿಸಿಎಂ ಹಾಸ್ಟೆಲ್ ಹಿಂಭಾಗ ನಡೆಯಲಿದೆ.

ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ನಿಜಸುಖಿ ಹಡಪದ ಅಪ್ಪಣ್ಣನವರ ಸಮಾಜದ ಶ್ರೀ ಅನ್ನದಾನಿ ಭಾರತಿ ಹಡಪದ ಅಪ್ಪಣ್ಣ ಮಹಾಸ್ವಾಮಿಗಳು, ಸುಕ್ಷೇತ್ರ ತಂಗಡಗಿ ಮಠ ಮುದ್ದೇಬಿಹಾಳ ತಾ ಲ್ಲೂಕು ಬಿಜಾಪುರ ಜಿಲ್ಲೆ ಇವರು ವಹಿಸಲಿದ್ದಾರೆ.

ಶಾಸಕ ಕೆ.ಎಸ್. ಬಸವಂತಪ್ಪ ಉದ್ಘಾಟನೆ ಮಾಡಲಿದ್ದಾರೆ.

ಆನಗೋಡು ಗ್ರಾ.ಪಂ.ನ ಶ್ರೀಮತಿ ಲಕ್ಷ್ಮೀದೇವಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ರಾಜ್ಯಾಧ್ಯಕ್ಷ ಸಿದ್ದಪ್ಪ ಮುಂಡಗೋಡು, ಸಮಾಜದ ಹಿರಿಯ ಮುಖಂಡರುಗಳಾದ ನಾಗರಾಜ್ ಹೆಚ್., ಮೈಲಾರ ಚಿದಾನಂದ ಬಸವಕೋಡು, ಸಂತೋಷ್, ನಾಗರಾಜ್ ಸರ್ಜಾಪುರ, ಹೆಚ್. ಶಶಿಧರ್, ವೆಂಕಟೇಶ್ ಸೇರಿದಂತೆ ಅನೇಕ ಮುಖಂಡರುಗಳು, ಜನಪ್ರತಿನಿದಿಗಳು, ಗ್ರಾಮಪಂಚಾಯ್ತಿ ಸದಸ್ಯರು, ಸಮಿತಿಯ ಗೌರವಾಧ್ಯಕ್ಷ ಸಂಗಪ್ಪ, ಅಧ್ಯಕ್ಷ ಜಯಪ್ಪ, ಉಪಾಧ್ಯಕ್ಷ ಮಲ್ಲಿಕಾರ್ಜುನ, ಕಾರ್ಯದರ್ಶಿ ನಾಗರಾಜ್, ಸಂಘಟನಾ ಕಾರ್ಯದರ್ಶಿ ಸಿಎಂ ರಾಜಕುಮಾರ್, ಖಜಾಂಚಿ ಮಲ್ಲಿಕಾರ್ಜುನ್, ಸಂಚಾಲಕರುಗಳಾದ ಮಹಾಂತೇಶ್, ಸೋಮಶೇಖರಪ್ಪ, ಕೆ. ಧನಂಜಯ್, ಬಿ.ಎನ್. ಸಿದ್ದೇಶ್, ಕೆ.ಬಿ. ಗಣೇಶ್, ತಿಪ್ಪೇಸ್ವಾಮಿ, ರುದ್ರೇಶ್ ಚಂದ್ರಶೇಖರ್, ಗಣೇಶ್ ಅವರುಗಳು ಭಾಗವಹಿಸಲಿದ್ದಾರೆ.

# ಹೊನ್ನಾಳಿ : ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಅಹವಾಲು ಸ್ವೀಕಾರ

ದಾವಣಗೆರೆ, ಆ. 4 - ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಇದೇ ದಿನಾಂಕ 9 ರಂದು ಹೊನ್ನಾಳಿ ತಾಲ್ಲೂಕು ಪ್ರವಾಸ ಕೈಗೊಳ್ಳಲಿದ್ದಾರೆ. ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್ ಕೌಲಾಪೂರೆ ಅವರು ಆಗಸ್ಟ್ 9 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರ ವರೆಗೆ ಹೊನ್ನಾಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.

# ನಗರದಲ್ಲಿ ನಾಳೆ ಉಚಿತ ಹೃದಯ ಸಮಾಲೋಚನೆ, ತಪಾಸಣೆ

ದಾವಣಗೆರೆ, ಆ. 4- ನಗರದ ಎಂ.ಸಿ.ಕಾಲೋನಿ 'ಬಿ' ಬ್ಲಾಕ್ 9ನೇ ಕ್ರಾಸ್‌ನಲ್ಲಿರುವ ದಾವಣಗೆರೆ ಹಾರ್ಟ್ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಾಡಿದ್ದು ದಿನಾಂಕ 6ರ ಭಾನುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ ಉಚಿತ ಹೃದಯ ಸಮಾಲೋಚನೆ ಕಾರ್ಯಕ್ರಮ ನಡೆಯಲಿದೆ.

ಉಚಿತ ಇಸಿಜಿ, ಇಸಿಹೆಚ್‌ಓ ಹಾಗೂ ಮಕ್ಕಳ ಹೃದಯ ರೋಗಕ್ಕೆ ಉಚಿತ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು. ಸಮಾಲೋಚನೆಯಲ್ಲಿ ಹೃದ್ರೋಗ ತಜ್ಞ ಡಾ. ಕೆ.ಎಸ್. ಸಂತೋಷ್ ಕುಮಾರ್ ಹಾಗೂ ಹೃದಯ ಶಸ್ತ್ರ ಚಿಕಿತ್ಸಕರಾದ ಡಾ. ಸಾಯಿ ಸೂರಜ್ ಉಪಸ್ಥಿತರಿರುವರು. ವಿವರಕ್ಕೆ ಸಂಪರ್ಕಿಸಿ : 63609 67090 / 93538 99577.

# ನಗರದಲ್ಲಿ ನಾಳೆ ಪದ್ಮಶಾಲಿ ಸಮಾಜದಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ.4- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದ ವತಿಯಿಂದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸೇಪೂರ್ ಆನಂದ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಡಿದ್ದು ದಿನಾಂಕ 6ರ ಭಾನುವಾರ ಸಂಜೆ 4 ಗಂಟೆಗೆ ಸಮಾರಂಭವನ್ನು ಪದ್ಮಶಾಲಿ ಸಮಾಜದ ಶ್ರೀ ಪ್ರಭುಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ದಕ್ಷಿಣ ಕನ್ನಡ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ (ಮಂಗಳೂರು) ಸದಸ್ಯ ಪಿ.ವಿ. ಲಿಂಗರಾಜ್ ಉದ್ಘಾಟಿಸಲಿದ್ದಾರೆ.

ಪಿ.ಜಿ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಲಿದ್ದು, ಪಿ.ಜೆ. ನಾಗರಾಜ್, ವೆಂಕಟೇಶ್ ಎಲ್.ಲಿಂಗಪಲ್ಲಿ, ರೇಣುಕರಾಜ್ ಜಿ.ಹೆಚ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಪದ್ಮಶಾಲಿ ಸಮಾಜದ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, 5 ರಿಂದ 14 ವರ್ಷದ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು ಅಂದು ಬೆಳಿಗ್ಗೆ 10 ರಿಂದ 12ರವರೆಗೆ ನಡೆಸಲಾಗುವುದು. ಮಧ್ಯಾಹ್ನ 3 ರಿಂದ 4 ಗಂಟೆವರೆಗೆ ವಿದ್ಯಾರ್ಥಿಗಳಿಗೆ ಮೋಟಿವೇಷನ್ ಕ್ಲಾಸ್ ನಡೆಸಲಾಗುವುದು ಎಂದು ಹೇಳಿದರು.

# ನಗರಕ್ಕೆ ಇಂದು ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ



ಜೈನ್ ಪಬ್ಲಿಕ್ ಶಾಲೆಯಲ್ಲಿ ಇಂದು 10 ಗಂಟೆಗೆ ಏರ್ಪಾಡಾಗಿರುವ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಭಾಗವಹಿಸಲಿದ್ದಾರೆ.

ಮಕ್ಕಳ ಪಾಲನಾ ಪೋಷಕರ ಕಲೆ ವಿಷಯ ಕುರಿತು ಗುರುರಾಜ ಕರ್ಜಗಿ ಅವರು ಮಾತನಾಡುವರು.

## ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ (ಕಿರಿಯ ವಿಭಾಗ) ದಾವಣಗೆರೆ.

**ಅಸಲು ದಾವಾ ಸಂಖ್ಯೆ. 55/2023**

ವಾದಿ : **ಎನ್.ಜಿ.ಎನ್. ಫೈನಾನ್ಸ್ ಅಂಡ್ ಕೋ ಆವರಗೆರೆ, ದಾವಣಗೆರೆ.** ಇದನ್ನು ಪ್ರತಿನಿಧಿಸುವವರು ಪ್ರೊಪ್ರೈಟರ್ ಶ್ರೀ ನಟರಾಜ್ ಎನ್. ಬಿನ್ ಲೇಟ್ ನಾರಪ್ಪ, ವಯಸ್ಸು 38 ವರ್ಷ, ಉತ್ತಮ ಚಂದ್ ಲೇಔಟ್. ದಾವಣಗೆರೆ.

*ವಿರುದ್ಧ*

ಪ್ರತಿವಾದಿ : **ಶ್ರೀ ಶಿವಮೂರ್ತಯ್ಯ ಹಿರೇಮಠ್ ಬಿನ್ ಗಂಗಾಧರಯ್ಯ ಹಿರೇಮಠ್,** ವಯಸ್ಸು 27 ವರ್ಷ, ಶ್ರೀ ಅನ್ನಪೂರ್ಣೇಶ್ವರಿ ಕ್ಯಾಂಡಿಮೆಂಟ್ ಮಾಲೀಕರು, ಚರ್ಚ್ ರಸ್ತೆ, ಬಕ್ಕೇಶ್ವರ ಶಾಲೆ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ, ವಾಸ : 4ನೇ ಮೇನ್, 11ನೇ ಕ್ರಾಸ್, ಸಪ್ತಗಿರಿ ಶಾಲೆ ಹತ್ತಿರ, ಎಸ್.ಎಸ್. ಲೇಔಟ್, ದಾವಣಗೆರೆ.

ಈ ಮೇಲ್ಕಂಡ ವಾದಿಯು ದಾವಣಗೆರೆಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. (ಕಿರಿಯ ವಿಭಾಗ)ದಲ್ಲಿ ದಿನಾಂಕ : 17.12.2022 ರಂದು ರೂ. 2,32,160/- ಗಳ ವಸೂಲಾತಿಗಾಗಿ ತಮ್ಮ ವಿರುದ್ಧ ದಾವಾ ಸಲ್ಲಿಸಿದ್ದು, ಸದರಿ ದಾವಾದಲ್ಲಿ ತಮಗೆ ಮಾನ್ಯ ಘನ ನ್ಯಾಯಾಲಯದಿಂದ ಹಾಜರಾಗಲು ಸಮನ್ಸ್‌ಗಳು ಬಂದಿದ್ದು, ತಾವು ಹಾಜರಾಗಿರುವುದಿಲ್ಲ. ಇದರ ಪ್ರಯುಕ್ತ ಈ ಬಗ್ಗೆ ತಮ್ಮ ತಕಾರಾರು ಇದ್ದಲ್ಲಿ ಖುದ್ದಾಗಿ ಆಗಲೀ ಅಥವಾ ವಕೀಲರ ಮುಖಾಂತರವಾಗಲೀ ದಿ. 21.09.2023ರಂದು ಬೆಳಿಗ್ಗೆ 11.00 ಗಂಟೆಗೆ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ಏಕಪಕ್ಷಿಯವಾಗಿ ನಿರ್ಣಯಿಸಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ತಾರೀಖು 04.08.2023ರಂದು ಕೊಡಲ್ಪಟ್ಟಿದೆ.

| | |
|---|---|
| **ಐ.ಕೆ. ಮಂಜುಳ** | **ನ್ಯಾಯಾಲಯದ ಆದೇಶದ ಮೇರೆಗೆ** |
| **ವಿ.ಆರ್. ಚಂದ್ರಶೇಖರ್** | **ಶಿರಸ್ತೇದಾರರು** |
| **ವಾದಿ ಪರ ವಕೀಲರು,** | ಪ್ರಧಾನ ಸಿವಿಲ್ ನ್ಯಾಯಾಲಯ ಹಾಗೂ |
| ಡೋರ್ ನಂ. 4/700, | ಜೆ.ಎಫ್.ಎಫ್.ಸಿ. (ಕಿ.ವಿ.) |
| ದೀಕ್ಷಿತ್ ರಸ್ತೆ, ದಾವಣಗೆರೆ. | ನ್ಯಾಯಾಲಯ, ದಾವಣಗೆರೆ. |

## ಕರ್ನಾಟಕ ಸರ್ಕಾರ

## (ಸಹಕಾರ ಇಲಾಖೆ)

**ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

'ಸೌಹಾರ್ದ ಸಹಕಾರಿ ಸೌಧ' ನಂ.68, 1ನೇ ಮಹಡಿ, 17 & 18ನೇ ಅಡ್ಡರಸ್ತೆ , ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055.

**ವ್ಯಾಜ್ಯ ಸಂಖ್ಯೆ:ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1395/2022-2023**

ವಾದಿ : ಕಾರ್ಯದರ್ಶಿ, ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ನಿಯಮಿತ, ಕುಕ್ಕುವಾಡ, ದಾವಣಗೆರೆ (ತಾ) (ಜಿ) ವಿರುದ್ಧ/-

ಪ್ರತಿವಾದಿಗಳು: ಪ್ರತಿವಾದಿ ನಂ. 1) ಶ್ರೀ. ಡಿ. ಸಿ. ನಾಗರಾಜ ಬಿನ್ ಚಂದ್ರಪ್ಪ, ಕುಕ್ಕುವಾಡ (ವಾಸಿ), ಕುಕ್ಕುವಾಡ (ಪೋ), ದಾವಣಗೆರೆ (ತಾ) (ಜಿ).

2) ಶ್ರೀಮತಿ. ದ್ರಾಕ್ಷಾಯಣಮ್ಮ ಕೋಂ ಚಂದ್ರಶೇಖರಪ್ಪ ಆರ್., ಕುಕ್ಕುವಾಡ (ವಾಸಿ), ಕುಕ್ಕುವಾಡ (ಪೋ), ದಾವಣಗೆರೆ (ತಾ) (ಜಿ).

3) ಶ್ರೀಮತಿ. ಆಶಾ ಕೋಂ ಎಸ್. ಸುರೇಶ್, ಕುಕ್ಕುವಾಡ (ವಾಸಿ), ಕುಕ್ಕುವಾಡ (ಪೋ), ದಾವಣಗೆರೆ (ತಾ) (ಜಿ).

**ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ: ಡಿಆರ್.ಡಿ/ಕ.ರಾ.ಸೌ.ಸಂ.ಸ.ನಿ/1395/2022-2023ರಂತೆ ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಸಾಲ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ: 25.08.2023 ರಂದು ಬೆಳಿಗ್ಗೆ 11-30 ಗಂಟೆಗೆ ಸರಿಯಾಗಿ ತಾವಾಗಲಿ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರ ವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥ ಪಡಿಸಲಾಗುವುದು.

ಸದರಿ ಪ್ರಕಟಣೆಯನ್ನು ದಿನಾಂಕ: 21.07.2023 ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ

**ಸಹಿ/- ಸಹಕಾರ ಸಂಘಗಳ ಉಪ ನಿಬಂಧಕರು (ನಿ.441)**
**ದಾವಾ ಪಂಚಾಯ್ತಿ ನ್ಯಾಯಾಲಯ**
**ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.**
**(ನ್ಯಾಯಾಲಯದ ಆದೇಶದ ಮೇರೆಗೆ)**

# ಶೀಘ್ರ ಲೋಕಸಭೆಗೆ ಸಂಭವನೀಯ ಅಭ್ಯರ್ಥಿ

## ರಾಹುಲ್ ಗಾಂಧಿ ಸೂಚನೆ

ಬೆಂಗಳೂರು, ಆ.4- ಮುಂಬರುವ ಲೋಕಸಭಾ ಚುನಾವಣೆಗೆ ಇನ್ನೊಂದು ತಿಂಗಳೊಳಗೆ ಸಂಭವನೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಖಾಡಕ್ಕಿಳಿಸಿ ಎಂದು ಕಾಂಗ್ರೆಸ್ ವರಿಷ್ಠರು ರಾಜ್ಯ ನಾಯಕರಿಗೆ ತಾಕೀತು ಮಾಡಿದ್ದಾರೆ.

ಲೋಕಸಭೆ ಚುನಾವಣೆ ಹಾಗೂ ರಾಜ್ಯ ಸರ್ಕಾರದ ಕಾರ್ಯವೈಖರಿಗೆ ಸಂಬಂಧಿಸಿ ದಂತೆ ಕಳೆದ ಬುಧವಾರ ದೆಹಲಿಯಲ್ಲಿ ಪಕ್ಷದ ವರಿಷ್ಠರು ನಡೆಸಿದ ಸಭೆಯಲ್ಲಿ ಈ ಆದೇಶ ಬಂದಿದೆ. ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಲೋಕ ಸಭಾ ಚುನಾವಣೆಗೆ ಏನೇನು ತಯಾರು ಮಾಡಿದ್ದೀರಿ. ಮಾರ್ಗಸೂಚಿ ಸಿದ್ಧವಿದೆಯೇ ಎಂದು ಪ್ರಶ್ನಿಸಿದ್ದಾರೆ.

ಅಭ್ಯರ್ಥಿ ಯಾರೆಂಬುದನ್ನು ಮೊದಲೇ ಗುರುತಿಸಿ ಚುನಾವಣಾ ಕಣಕ್ಕಿಳಿಸುವುದರಿಂದ ಮತದಾರರಿಗೂ ತಿಳಿಯುತ್ತದೆ ಮತ್ತು ತಮಗಾಗಿ ಕಾರ್ಯಕರ್ತರನ್ನು ಸಂಘಟಿಸಿ ಜನರ ಬಳಿ ತೆರಳುತ್ತಾರೆ.

ನೀವು ವಿಧಾನಸಭೆ ಚುನಾವಣೆಯ ಗೆಲುವಿನ ಗುಂಗಿನಲ್ಲಿರಬೇಡಿ. ಒಂದೆಡೆ ಜನ ಪರ ಆಡಳಿತ ನೀಡುವುದರ ಜತೆಗೆ ಜನಸಂಪರ್ಕವೂ ಇರಲಿ.

ಅಭ್ಯರ್ಥಿ ಕ್ಷೇತ್ರಾದ್ಯಂತ ಸುತ್ತಾಡುವುದ ರಿಂದ ಆತನಿಗೆ ಸರಿ-ತಪ್ಪುಗಳ ಅರಿವಾಗುತ್ತದೆ. ಪಕ್ಷದ ಗೆಲುವಿಗೆ ಏನಾಗಬೇಕು ಎಂಬ ಮಾಹಿತಿ ನೀಡುತ್ತಾನೆ. ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಕನಿಷ್ಠ 20 ಸ್ಥಾನವನ್ನು ನೀವು ಗೆದ್ದು ನಮಗೆ ಕೊಡಬೇಕು. ಇದಕ್ಕಾಗಿ ಈಗಿನಿಂದಲೇ ಕಾರ್ಯಪ್ರವೃತ್ತರಾಗಿ ಸಮಯ ವ್ಯರ್ಥ ಮಾಡಬೇಡಿ ಎಂದು ಹೇಳಿದ್ದಾರೆ.

# ಜ್ಞಾನವಾಪಿ ಮಸೀದಿ ಸಮೀಕ್ಷೆಗೆ ಸುಪ್ರೀಂ ಅನುಮತಿ

ನವದೆಹಲಿ, ಆ. 4 - ವಾರಣಾಸಿಯ ಜ್ಞಾನವಾಪಿ ಮಸೀದಿಯ ಪುರಾತತ್ವ ಸಮೀಕ್ಷೆಗೆ ಅವಕಾಶ ನೀಡುವ ಅಲಹಾಬಾದ್ ಹೈಕೋರ್ಟ್ ಆದೇಶ ತಡೆಯಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಹಿಂದೂ ದೇವಾಲಯದ ಮೇಲೆ ಮಸೀದಿ ನಿರ್ಮಿಸಲಾಗಿದೆಯೇ ಎಂಬುದನ್ನು ಪತ್ತೆ ಮಾಡಲು ಸಮೀಕ್ಷೆ ನಡೆಸಲಾಗುತ್ತಿದೆ.

ಆದರೆ, ಮಸೀದಿಗೆ ಯಾವುದೇ ಹಾನಿಯಾಗುವ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂದು ಪುರಾತತ್ವ ಇಲಾಖೆಗೆ ತಿಳಿಸಲಾಗಿದೆ. ವಾರಣಾಸಿ ಜಿಲ್ಲಾ ನ್ಯಾಯಾಲಯದ ಆದೇಶದ ಅನ್ವಯ ಸಮೀಕ್ಷೆ ನಡೆಸಲಾಗುತ್ತಿದೆ. ಜಿಲ್ಲಾ ನ್ಯಾಯಾಲಯದ ಆದೇಶದ ವಿರುದ್ಧ ಅಂಜುಮನ್ ಇಂತೆಜಾಮಿಯಾ ಮಸ್ಜಿದ್ ಸಮಿತಿಯು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

# ಗಿಡಗಳನ್ನು ಮಕ್ಕಳಂತೆ ಪೋಷಿಸಿ ಬೆಳೆಸಬೇಕು

## ಕೆ.ಎಚ್.ಬಿ. ತುಂಗಭದ್ರಾ ಬಡಾವಣೆಯಲ್ಲಿನ ವನಮಹೋತ್ಸವದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಕರೆ

ದಾವಣಗೆರೆ, ಆ.4- ಧೂಳು ಮುಕ್ತ ನಗರ ಎಂಬ ಕಳಂಕವನ್ನು ತೊಡೆದು ಹಾಕಲು ನಾವು ಹೆಚ್ಚು ಮರ ಗಿಡಗಳನ್ನು ಬೆಳೆಸಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಕರೆ ನೀಡಿದರು.

ನಗರದ ಕೆ.ಎಚ್.ಬಿ. ತುಂಗಭದ್ರಾ ಬಡಾವಣೆಯಲ್ಲಿ ಶುಕ್ರವಾರ ಜರುಗಿದ ವನಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಶಿಷ್ಟ ಜೀವ ವೈವಿಧ್ಯದ ಹಸಿರು ನಗರವನ್ನಾಗಿ ಮಾಡಲು ಪಣ ತೊಡಲು ಹಾಗೂ ಮಾಲಿನ್ಯ ಮುಕ್ತ ನಗರ ಮಾಡಲು ಎಲ್ಲರ ಸಹಕಾರ ಅಗತ್ಯ. ನಾಗರಿಕ ಸಮಾಜದ ಪ್ರತಿಯೊಬ್ಬರೂ ಸಹ ಗಿಡಗಳನ್ನು ಮಕ್ಕಳಂತೆ ಪೋಷಿಸಿ ಬೆಳೆಸಬೇಕಾಗಿದೆ. ಉತ್ತಮ ಪರಿಸರದಿಂದ ಜನರ ಆರೋಗ್ಯ ರಕ್ಷಣೆ ಸಾಧ್ಯವಾಗಲಿದ್ದು, ಈ ನಿಟ್ಟಿನಲ್ಲಿ ಪ್ರತಿಯೊಬ್ಬ ನಾಗರೀಕರು ಗಿಡ, ಮರಗಳನ್ನು ಬೆಳೆಸುವ ಮೂಲಕ ಪರಿಸರ ಸಂರಕ್ಷಣೆ ಮಾಡಲು



ಮುಂದಾಗಬೇಕು ಎಂದು ಕರೆ ನೀಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್.ಹೆಗಡೆ ಮಾತನಾಡಿ, ಮನುಷ್ಯ ಬದುಕಲು ಮಣ್ಣು, ನೀರು ಮತ್ತು ಗಾಳಿ ಬಹಳ ಮುಖ್ಯ. ಮನುಷ್ಯನಿಗೆ ಅರಿವಿಲ್ಲದೆಯೇ ಕಾಡು ಕಡಿಯುತ್ತಾ ತನ್ನ ಅವಸಾನವನ್ನು ತಾನೇ ತಂದುಕೊಳ್ಳುತ್ತಿದ್ದಾನೆ ಎಂದರು.

ಈಗಾಗಲೇ ಸ್ಮಾರ್ಟ್ ಸಿಟಿ ಎಂದು ಹೆಸರಾದ ದಾವಣಗೆರೆ ನಗರ ಇಂದು ಮಾಲಿನ್ಯ ನಗರದ ಪಟ್ಟಿಗೆ ಸೇರಿದೆ. ದೇಶದ ಮಾಲಿನ್ಯ ಮುಕ್ತ ನಗರದ ಶ್ರೇಯಾಂಕದಲ್ಲಿ 136 ನೇ ಸ್ಥಾನದಲ್ಲಿರುವುದು ವಿಷಾದದ ಸಂಗತಿ. ನಮ್ಮ ನಾಳೆಗಳನ್ನು ನಾವು ಮುಂದಿನ ಪೀಳಿಗೆಗೆ ಉಳಿಸಬೇಕಿದೆ. ಈ ದಿಸೆಯಲ್ಲಿ ಗ್ರಾಸಿಂ ಇಂಡಸ್ಟ್ರೀಸ್ ರವರು ಪರಿಸರ ಉಳಿಸುವಲ್ಲಿ ಸಾಮಾಜಿಕ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ವನಮಹೋತ್ಸವ ಅಂಗವಾಗಿ ಕೆ.ಎಚ್. ಬಿ. ತುಂಗಭದ್ರಾ ಬಡಾವಣೆಯಲ್ಲಿ ನಾಲ್ಕೂವರೆ ಎಕರೆ ವಿಸ್ತಾರದ ಜಾಗದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಕರಣ್ಣನವರ, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅರುಣಕುಮಾರ್ ಎಲ್. ಹೆಚ್, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಡಾ.ಲಕ್ಷ್ಮಿಕಾಂತ, ಡಾ.ಮಂಜುನಾಥ, ಪೊಲೀಸ್ ಅಧಿಕಾರಿ ಯಶವಂತ್, ಗ್ರಾಸಿಂ ಇಂಡಸ್ಟ್ರೀಸ್ ನ ಮುಖ್ಯಸ್ಥ ಡಾ. ಅಜಯ್ ಗುಪ್ತಾ ಉಪಸ್ಥಿತರಿದ್ದರು.

# ವರ್ಗಾವಣೆ ಚಿಂತೆ : ಸಾರ್ವಜನಿಕರಿಗೆ ಲಭ್ಯವಾಗದ ಅಧಿಕಾರಿಗಳು

ಹರಿಹರ, ಆ. 4 - ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯಾದ ನಂತರ ವರ್ಗಾವಣೆ ಪರ್ವ ಆರಂಭವಾಗಿದ್ದು, ಅಧಿಕಾರಿಗಳು ಈ ಪ್ರಕ್ರಿಯೆಯಲ್ಲೇ ತೊಡಗಿಕೊಂಡು ಸಾರ್ವಜನಿಕರಿಗೆ ಲಭ್ಯವಾಗುತ್ತಿಲ್ಲ ಎಂಬ ದೂರು ಕೇಳಿ ಬರುತ್ತಿದೆ.

ತಾಲ್ಲೂಕಿನ ಹಲವಾರು ಅಧಿಕಾರಿಗಳು ತಮಗೆ ಬೇಕಾದ ಸ್ಥಳಕ್ಕೆ ವರ್ಗಾವಣೆ ಮಾಡಿಸಿಕೊಳ್ಳಲು ರಾಜಧಾನಿಯಲ್ಲಿ ಠಿಕಾಣಿ ಹೂಡಿದ್ದಾರೆ.

ಇತ್ತೀಚೆಗೆ ತಹಶೀಲ್ದಾರ್ ಪೃಥ್ವಿ ಸಾನಿಕಂ ಹಾಗೂ ಬಿಇಒ ಹನುಮಂತಪ್ಪ ವರ್ಗಾವಣೆ ಮಾಡಲಾಗಿತ್ತು. ನಂತರ ಸಾನಿಕಂ ಅವರು ನ್ಯಾಯಾಲಯದ ಮೊರೆ ಹೋಗಿ ಮತ್ತೆ ಇದೇ ಹುದ್ದೆಗೆ ವಾಪಸ್ಸಾಗಿದ್ದಾರೆ. ಬಿಇಒ ಹನುಮಂತಪ್ಪ ಅವರೂ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಪೊಲೀಸ್, ಆರೋಗ್ಯ, ಉಪ ನೋಂದಣಿ ಇಲಾಖೆ, ಪಿಡಬ್ಲ್ಯೂಡಿ ಸೇರಿದಂತೆ ಹಲವಾರು ಇಲಾಖೆಗಳ ಅಧಿಕಾರಿಗಳು ವರ್ಗಾವಣೆ ಚಿಂತನೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

# ನಗರದಲ್ಲಿ ಇಂದು ಶ್ರೀ ಸತ್ಯನಾರಾಯಣ ಪೂಜೆ

ಎಸ್.ಕೆ.ಪಿ.ರಸ್ತೆಯಲ್ಲಿರುವ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ 67ನೇ ವರ್ಷದ 1008 ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಾರ್ಯ ಕ್ರಮವು ಇಂದು ನಡೆಯಲಿದೆ ಎಂದು ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ತಿಳಿಸಿದ್ದಾರೆ



ಲೋಕಕಲ್ಯಾಣಾರ್ಥ ಹಾಗೂ ಸರ್ವರ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸಿ, ಏರ್ಪಡಿಸಿರುವ ಈ ಪೂಜಾ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 7 ರಿಂದ ವಿವಿಧ ಪೂಜಾ ಕಾರ್ಯಗಳು ಆರಂಭವಾಗಲಿದ್ದು, ಬೆಳಿಗ್ಗೆ 8.45 ರಿಂದ ಮಹಾ ಗಣಪತಿ ಪೂಜಾ, ಶ್ರೀ ನವಗ್ರಹ ಪೂಜಾ, ಶ್ರೀ ಸತ್ಯನಾರಾ ಯಣಸ್ವಾಮಿ ವ್ರತ ಪೂಜಾ, ಕಥಾ ಶ್ರವಣ, ಮಹಾಮಂಗಳಾರತಿ ನಡೆಯಲಿದೆ. ಸಂಜೆ 7 ರಿಂದ ಶ್ರೀ ಸತ್ಯನಾರಾಯಣ ಸ್ವಾಮಿಗೆ ರಥಾರೋಹಣ, ಉಯ್ಯಾಲೆ ಸೇವೆ,ಮಂತ್ರ - ಪುಷ್ಪ ಅಷ್ಟಾವಧಾನ ನಡೆಸಲಾಗುವುದು. ಸರ್ವ ಭಕ್ತಾಧಿಗಳು ಪೂಜಾ ಕಾರ್ಯ ಕ್ರಮ ಗಳಲ್ಲಿ ಭಾಗವಹಿಸುವಂತೆ ಸಂಘದ ಕಾರ್ಯಾಧ್ಯಕ್ಷ ಕಾಸಲ್ ಎಸ್.ಸತೀಶ್ ಕೋರಿದ್ದಾರೆ.

**ಸರ್ವ ಸದಸ್ಯರ ಸಭೆ :** ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಸರ್ವ ಸದಸ್ಯರ ಸಭೆಯು ಇಂದು ಸಂಜೆ 5 ಗಂಟೆಗೆ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕಾಸಲ್ ಎಸ್. ವಿಠ್ಠಲ್ ಶ್ರೀಮತಿ ಸುನಂದಮ್ಮ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ರವೀಂದ್ರಗುಪ್ತ ತಿಳಿಸಿದ್ದಾರೆ.

# ಚಿತ್ರದುರ್ಗಕ್ಕಿಂದು ಆರೋಗ್ಯ ಸಚಿವ



ಕಲುಷಿತ ನೀರು ಸೇವಿಸಿ ಮೂವರು ಮೃತಪಟ್ಟು, ನೂರಕ್ಕೂ ಹೆಚ್ಚು ಜನರು ಅನಾರೋಗ್ಯಕ್ಕೆ ತುತ್ತಾಗಿರುವ ಕವಾಡಿಗರಹಟ್ಟಿ ಗ್ರಾಮಕ್ಕೆ ಅರೋಗ್ಯ ಸಚಿವ ದಿನೇಶ್ ಗುಂಡೂರಾವ್ ಇಂದು ಭೇಟಿ ನೀಡಲಿದ್ದಾರೆ ಎಂದು ಚಿತ್ರದುರ್ಗದ ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ.ಎನ್.ಚಂದ್ರಪ್ಪ ತಿಳಿಸಿದ್ದಾರೆ.

# ಸಂಸದ ಸಿದ್ದೇಶ್ವರ ಇಂದಿನ ಕಾರ್ಯಕ್ರಮ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಮಧ್ಯಾಹ್ನ 12 ರಿಂದ 4 ರವರೆಗೆ ದಾವಣಗೆರೆಯ ತಮ್ಮ ಜನಸಂಪರ್ಕ ಕಛೇರಿಯಲ್ಲಿ ಸಾರ್ವಜನಿಕರನ್ನು ಭೇಟಿಯಾಗಲಿದ್ದಾರೆ.


ದಾವಣಗೆರೆ ಹಾರ್ಟ್ ಆಸ್ಪತ್ರೆ

9ನೇ ಮುಖ್ಯರಸ್ತೆ, 5ನೇ ಕ್ರಾಸ್, ಎಂ.ಸಿ. ಕಾಲೋನಿ, 'ಬಿ' ಬ್ಲಾಕ್ ದಾವಣಗೆರೆ.

ಸ್ವಾತಂತ್ರ್ಯೋತ್ಸವ ಅಂಗವಾಗಿ ಉಚಿತ ಹೃದಯ ಸಮಾಲೋಚನೆ

ದಿನಾಂಕ ಆಗಸ್ಟ್ 6, ಭಾನುವಾರ 2023

ಸಮಯ ಬೆಳಿಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ.

ಹೃದ್ರೋಗ ತಜ್ಞ: ಡಾ. ಕೆ.ಎಸ್. ಸೋಮಶೇಖರ್ ಎಂ.ಡಿ., ಡಿ.ಎಂ., | ಹೃದಯ ಶಸ್ತ್ರ ಚಿಕಿತ್ಸಕರು : ಡಾ. ಸಾಯಿ ಸೂರಜ್, MS, Mch

ಉಚಿತ ECG., ECHO | ಮಕ್ಕಳ ಹೃದಯ ರೋಗಕ್ಕೆ ಉಚಿತ ಶಸ್ತ್ರ ಚಿಕಿತ್ಸೆ

ಸಂಪರ್ಕಿಸಿ : 63609 67090 / 93538 99577

ವಿ.ಸೂ. ನಿಮ್ಮ ಹಳೆಯ ದಾಖಲೆಗಳಿದ್ದಲ್ಲಿ ಜೊತೆಗೆ ತರುವುದು.


# ವಿನೂತನ ಸಮಾಜದಲ್ಲಿ ದೀರ್ಘ ನೋವಿನ ಕುರಿತು ಮಾಹಿತಿ



ದಾವಣಗೆರೆ, ಆ.4- ವಿನೂತನ ಮಹಿಳಾ ಸಮಾಜದಲ್ಲಿ ಚಂದ್ರಿಕಾ ಮಂಜುನಾಥ ಅವರ ಅಧ್ಯಕ್ಷತೆಯಲ್ಲಿ ದೀರ್ಘ ಕಾಲದ ನೋವಿನ ಬಗ್ಗೆ ಕುರಿತು ವೈದ್ಯ ಸಾಗರ್ ಮಾಜಿ ಗೌಡರ್ ಅವರು ಅತ್ಯುತ್ತಮ ಮಾಹಿತಿ ನೀಡಿದರು. ಚಂದ್ರಕಲಾ ಮತ್ತು ಕಲ್ಪನಾ ಪ್ರಾರ್ಥಿಸಿದರು. ಗೀತಾ ರೆಡ್ಡಿ ಸ್ವಾಗತಿಸಿದರು.ಪುಷ್ಪಾ ಬಸವರಾಜ್ ಕಾರ್ಯಕ್ರಮ ನಿರೂಪಿಸಿದರು. ರತ್ನಾ ರೆಡ್ಡಿ, ಹೇಮಾ ಗಣೇಶ್, ಇಂದಿರಾ ರೆಡ್ಡಿ, ಸುಧಾ ಪಾಟೀಲ್, ಸುಕನ್ಯಾ ಬಸವರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.





Available @

GUPTA'S SHOPPE

#19, New Murugharajendra Complex

Opp.: DDPI Office, Davangere. Mobi.: 90351 55455



ಶ್ರೀಮತಿ ಶೃತಿ ಮಾಕನೂರು ಅವರಿಗೆ ಡಾಕ್ಟರೇಟ್ : ಅಭಿನಂದನೆಗಳು



ಡಾ. ಜೆ.ಕೆ. ರಾಜು, B.E, MBA, Ph.D
Professor & Chairman
Institute of Management Studies
Davanagere University.



ದಾವಣಗೆರೆಯ ಉದ್ಯಮಿ ಹಾಗೂ ಬಾಪೂಜಿ ಗೌವರ್ನಿಂಗ್ ಕೌನ್ಸಿಲ್ ಮೆಂಬರ್ ಆಗಿದ್ದ ದಿ. ಮಾಕನೂರು ಮಲ್ಲಿಕಾರ್ಜುನಪ್ಪ ಅವರ ಪುತ್ರಿ ಹಾಗೂ ಬಾಪೂಜಿ ಎಂ.ಬಿ.ಎ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ **ಶ್ರೀಮತಿ ಶೃತಿ ಮಾಕನೂರು** ಇವರು ದಾವಣಗೆರೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಚೇರ್‌ಮೆನ್ ಹಾಗೂ ಪ್ರಾಧ್ಯಾಪಕರಾದ **ಡಾ. ಜೆ.ಕೆ. ರಾಜು** ಇವರ ಮಾರ್ಗದರ್ಶನದಲ್ಲಿ ಮಂಡಿಸಿದ *" A Study on work-life Balance Of Women Employees of Banking Sector in Karnataka "* ಎಂಬ ಮಹಾಪ್ರಬಂಧಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದ್ದು, ಈ ಶುಭ ಸಂದರ್ಭದಲ್ಲಿ ಶ್ರೀಮತಿ ಶೃತಿ ಮಾಕನೂರು ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು.

ಶೃತಿ ಅವರಿಗೆ ಮಾರ್ಗದರ್ಶನ ಮಾಡಿದ ಪ್ರಾಧ್ಯಾಪಕರಾದ ಡಾ. ಜೆ.ಕೆ. ರಾಜು ಅವರಿಗೆ ಹೃದಯ ಪೂರ್ವಕ ಕೃತಜ್ಞತೆಗಳು.

ಶುಭ ಕೋರುವವರು : ತಾಯಿ : ಶ್ರೀಮತಿ ನಾಗರತ್ನ ಕೋಂ ದಿ. ಮಾಕನೂರು ಮಲ್ಲಿಕಾರ್ಜುನಪ್ಪ
ತಂಗಿ : ಸ್ಫೂರ್ತಿ ಮಾಕನೂರು, ಪತಿ : ಜಿ.ಬಿ. ಕಾಂತರಾಜ್, ಮಾವ : ಜಿ. ಬಸಪ್ಪ,
ಅತ್ತೆ : ಶ್ರೀಮತಿ ಅನುಸೂಯಮ್ಮ ಬಸಪ್ಪ, ಮಕ್ಕಳಾದ : ಜಿ.ಸುಮುಖ, ಕುಮಾರಿ ಚಾರ್ವಿ


# ನಗರದಲ್ಲಿ ಹೊಸ 25 ಐಕ್ಯೂಬ್ ಎಲೆಕ್ಟ್ರಿಕ್ ಸ್ಮಾರ್ಟ್ ಸ್ಕೂಟರ್ ವಿತರಣೆ




ದಾವಣಗೆರೆ, ಆ. 4 - ನಗರದ ಅಕ್ಷಯ ಟಿವಿಎಸ್ ಷೋ ರೂಂನಲ್ಲಿ 25 ಹೊಸ ಐಕ್ಯೂಬ್ ಎಲೆಕ್ಟ್ರಿಕ್ ಸ್ಮಾರ್ಟ್ ಸ್ಕೂಟರ್‌ಗಳನ್ನು ಇಂದು ಗ್ರಾಹಕರಿಗೆ ವಿತರಿಸಲಾಯಿತು.

ಮಾರುಕಟ್ಟೆಯಲ್ಲಿ ಇತ್ತೀಚೆಗೆ ಪರಿಚಯಿಸಿದ್ದರೂ ಕಡಿಮೆ ಸಮಯದಲ್ಲಿಯೇ ಜನಪ್ರಿಯವಾಗಿರುವ ಐಕ್ಯೂಬ್ ಎಲೆಕ್ಟ್ರಿಕ್ ಸ್ಕೂಟರ್‌ಗಳನ್ನು ಗ್ರಾಹಕರು ಉತ್ಸಾಹದಿಂದ ಖರೀದಿಸಿದರು. ಈ ಸಂದರ್ಭದಲ್ಲಿ ಅಕ್ಷಯ ಟಿವಿಎಸ್ ಡೀಲರ್ ಶಿಪ್ ಮಾಲೀಕ ಎಸ್. ಭಾನು ಪ್ರಕಾಶ್, ಟಿವಿಎಸ್ ಕಂಪನಿಯ ಕರ್ನಾಟಕ ಏರಿಯಾ ಸರ್ವಿಸ್ ಮ್ಯಾನೇಜರ್ ಜಿ. ವಸಂತ್ ಕುಮಾರ್, ಟೆರಿಟರಿ ಸರ್ವಿಸ್ ಮ್ಯಾನೇಜರ್ ಝೀಷಾನ್ ಹಾಗೂ ದಾವಣಗೆರೆ ಶಾಖೆಯ ವ್ಯವಸ್ಥಾಪಕ ಸಂಜೀವ್ ಅವರುಗಳು ಉಪಸ್ಥಿತರಿದ್ದು, ಹೊಸ ದ್ವಿಚಕ್ರ ವಾಹನದ ಕೀಗಳನ್ನು ಗ್ರಾಹಕರಿಗೆ ಹಸ್ತಾಂತರಿಸಿದರು.

# ಸಮರ ಸೇನೆ ರಾಜ್ಯ ವರ್ತಕರ ಘಟಕದ ಅಧ್ಯಕ್ಷರಾಗಿ ಕಿರಣ್ ಬಾಳೆಹೊಲದ



ದಾವಣಗೆರೆ, ಆ.4- ಕರುನಾಡ ಸಮರ ಸೇನೆ ಸಂಘಟನೆಯ ರಾಜ್ಯ ವರ್ತಕರ ಘಟಕದ ಅಧ್ಯಕ್ಷರಾಗಿ ಕಿರಣ್ ಕುಮಾರ್ ಬಿ.ಎಂ. (ಬಾಳೆಹೊಲದ) ಆಯ್ಕೆಯಾಗಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ನಿನ್ನೆ ನಡೆದ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು. ಈ ಸಂದರ್ಭದಲ್ಲಿ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಐಗೂರು ಸುರೇಶ್, ಕಾಕೋಳ್ ಹನುಮಂತಗೌಡರು, ಗೌರವ ಅಧ್ಯಕ್ಷ ತಾನೋಜಿರಾವ್ ಮತ್ತಿತರರು ಉಪಸ್ಥಿತರಿದ್ದರು.

# ಚುನಾವಣಾ ಸುಳ್ಳು ಪ್ರಮಾಣ ಪತ್ರಕ್ಕೆ ಶಿಕ್ಷೆ ಹೆಚ್ಚಿಸಲು ಶಿಫಾರಸ್ಸು

ನವದೆಹಲಿ, ಆ. 4 - ಚುನಾವಣಾ ಸಮಯದಲ್ಲಿ ಸುಳ್ಳು ಪ್ರಮಾಣಪತ್ರ ನೀಡುವುದಕ್ಕೆ ವಿಧಿಸಲಾಗುವ ಶಿಕ್ಷೆಯ ಪ್ರಮಾಣವನ್ನು ಈಗಿರುವ ಆರು ತಿಂಗಳಿನಿಂದ 2 ವರ್ಷಕ್ಕೆ ಹೆಚ್ಚಿಸಬೇಕು ಎಂದು ಸಂಸದೀಯ ಸಮಿತಿಯೊಂದು ಶಿಫಾರಸ್ಸು ಮಾಡಿದೆ.

ಕಾನೂನೂ ಹಾಗೂ ಸಿಬ್ಬಂದಿ ಕುರಿತ ಸಂಸದೀಯ ಸಮಿತಿ ಈ ಶಿಫಾರಸ್ಸು ಮಾಡಿದೆ. ಆದರೆ, ತೀವ್ರ ಸ್ವರೂಪದ ಪ್ರಕರಣಗಳಲ್ಲಿ ಮಾತ್ರ ಈ ರೀತಿಯ ದಂಡ ವಿಧಿಸಬೇಕು. ಸಣ್ಣ ಹಾಗೂ ಅನುದ್ದೇಶಿತ ತಪ್ಪುಗಳಿಗೆ ಕ್ರಮ ತೆಗೆದುಕೊಳ್ಳಬಾರದು ಎಂದು ಸಮಿತಿ ಹೇಳಿದೆ.


ಅತೀ ದೊಡ್ಡ ಪೀಠೋಪಕರಣ ಮಾರಾಟ!

FURNITURE & HOME INTERIOR EXPO




ದಿನಾಂಕ & ಸ್ಥಳ 4 5 6 7 8 ಆಗಸ್ಟ್ 2023 | ಸಮಯ ಬೆಳಿಗ್ಗೆ 10 - ರಾತ್ರಿ 9.00

ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶಾಮನೂರು, ದಾವಣಗೆರೆ.

| | | | | |
|---|---|---|---|---|
| ಆಧುನಿಕ ಸೋಫಾ ಸೆಟ್ | ರಿಕ್ಲೈನರ್ ಸೋಫಾ ಕಾರ್ನರ್ ಸೋಫಾ ಸೆಟ್ | ಡೈನಿಂಗ್ ರೂಮ್ ಫರ್ನಿಚರ್ | ಇಟಾಲಿಯನ್ ಡಿಸೈನರ್ ಸೋಫಾಸ್ | ಆ್ಯಂಟಿಕ್ & ಐರನ್ ಫರ್ನಿಚರ್ |
| ಮಸಾಜ್ ಚೇರ್ | ಶೀಶಮ್ ವುಡ್ ಫರ್ನಿಚರ್ | ಕಾರ್ಪೆಟ್, ರಗ್ಸ್ & ಮ್ಯಾಟ್ರಸಸ್ | ಡೆಕೋರೇಟಿವ್ ಆರ್ಟ್ & ಹ್ಯಾಂಡಿಕಾಫ್ಟ್ಸ್ | ಕಾರ್ವ್ ವುಡನ್ ಸ್ವಿಂಗ್ |

ವಿಶಾಲವಾದ ಕಾರು ಪಾರ್ಕಿಂಗ್ | ಉಚಿತ ಪ್ರವೇಶ | 91 96111 76669



ಶ್ರೀ ಆಂಜನೇಯ ಸೌಹಾರ್ದ ಸಹಕಾರಿ ಸಂಘ ನಿಯಮಿತ

ಕುಕ್ಕುವಾಡ - 577 525. ದಾವಣಗೆರೆ ತಾ॥, ದಾವಣಗೆರೆ ಜಿಲ್ಲೆ.

26ನೇ ವರ್ಷದ 2022-2023ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಸಹಕಾರಿಯ 2022-2023ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಯುತ ಜಿ.ಎಂ. ರುದ್ರಗೌಡ್ರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ 05-08-2023ರ ಶನಿವಾರ ಮಧ್ಯಾಹ್ನ 3-30 ಘಂಟೆಗೆ ಶ್ರೀ ಮಾರಿಕಾಂಬ ದೇವಸ್ಥಾನದ ಮುಂಭಾಗದಲ್ಲಿ ಏರ್ಪಡಿಸಿರುತ್ತೇವೆ. ಮಾನ್ಯ ಸರ್ವ ಸದಸ್ಯರೆಲ್ಲರೂ ಸರಿಯಾದ ಸಮಯಕ್ಕೆ ಸಭೆಗೆ ಆಗಮಿಸಬೇಕಾಗಿ ವಿನಂತಿ.

ಸಹಕಾರಿಯ ಆರ್ಥಿಕ ಪ್ರಗತಿ ಪಕ್ಷಿನೋಟ (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರಗಳು | 2019-20 | 2020-21 | 2021-22 | 2022-23 | ಹೆಚ್ಚಳ ಶೇ % |
|---|---|---|---|---|---|---|
| 1. | ಸದಸ್ಯರ ಸಂಖ್ಯೆ | 6177 | 6706 | 7777 | 8176 | 5% |
| 2. | ಷೇರು ಬಂಡವಾಳ | 170.06 | 187.27 | 217.79 | 246.22 | 13% |
| 3. | ನಿಧಿಗಳು | 105.15 | 122.85 | 143.15 | 176.53 | 23% |
| 4. | ಠೇವಣಿಗಳು | 1196.27 | 1357.92 | 1630.94 | 2123.36 | 30% |
| 5. | ಸದಸ್ಯರಿಗೆ ಸಾಲಗಳು | 1126.98 | 1265.05 | 1583.60 | 1721.01 | 9% |
| 6. | ಲಾಭ ಗಳಿಕೆ | 1474.94 | 1502.34 | 29.18 | 27.16 | -7% |
| 7. | ದುಡಿಯುವ ಬಂಡವಾಳ | 17.13 | 13.21 | 1979.32 | 2503.43 | 26% |
| 8. | ಲಾಭಾಂಶ ಹಂಚಿಕೆ | 8% | 5% | 8% | 6% (ಉದ್ದೇಶಿತ) | |

ಆಡಳಿತ ಮಂಡಳಿಯ ಪರವಾಗಿ : ಜಿ.ಎಸ್.ರಾಜು, ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಆಡಳಿತ ಮಂಡಳಿಯ ಸದಸ್ಯರು



ಶ್ರೀ ಜಿ.ಎಂ. ರುದ್ರಗೌಡ್ರು ಸಂಸ್ಥಾಪಕ ಅಧ್ಯಕ್ಷರು; ಶ್ರೀ ಜಿ.ಆರ್. ಹರ್ಷ ಉಪಾಧ್ಯಕ್ಷರು; ಶ್ರೀ ಕೆ.ಟಿ. ಚಂದ್ರಶೇಖರಪ್ಪ ನಿರ್ದೇಶಕರು; ಶ್ರೀ ಕೆ.ಶರಣಪ್ಪ ನಿರ್ದೇಶಕರು; ಶ್ರೀ ಬಿ.ಹೆಚ್. ಶಿವನಗೌಡ ನಿರ್ದೇಶಕರು; ಶ್ರೀ ಕೆ.ಎಂ. ಉಮೇಶ್ ನಿರ್ದೇಶಕರು; ಶ್ರೀ ಟಿ.ಎಂ. ಕರಿಬಸಪ್ಪ ನಿರ್ದೇಶಕರು; ಶ್ರೀಮತಿ ಶೋಭಾ ಸಿ. ಮುಳ್ಳಳ್ಳಿ ಮಹಿಳಾ ನಿರ್ದೇಶಕರು; ಶ್ರೀ ಪಿ.ಎನ್. ಮಹೇಂದ್ರಪ್ಪ ನಿರ್ದೇಶಕರು; ಶ್ರೀ ಕೆ.ಜಿ. ಕೇದಾರಮೂರ್ತಿ ನಿರ್ದೇಶಕರು; ಶ್ರೀ ಕೆ.ಜಿ. ಯೋಗೇಂದ್ರಪ್ಪ ನಿರ್ದೇಶಕರು; ಶ್ರೀ ಕೆ.ಎ. ಮಹಮ್ಮದ್ ನಿರ್ದೇಶಕರು; ಶ್ರೀ ಬಿ. ವೆಂಕಟೇಶ್ ನಿರ್ದೇಶಕರು; ಶ್ರೀಮತಿ ಡಿ.ಎಂ. ಮಂಜುಳ ಮಹಿಳಾ ನಿರ್ದೇಶಕರು; ಶ್ರೀಮತಿ ಕೆ. ಪವಿತ್ರ ಕಾನೂನು ಸಲಹೆಗಾರರು, ದಾವಣಗೆರೆ; ಶ್ರೀ ಎಸ್.ಎಸ್.ಬಸನಗೌಡ್ರ ಕಾನೂನು ಸಲಹೆಗಾರರು, ಬ್ಯಾಡಗಿ; ಶ್ರೀ ಜಿ.ಎಸ್. ರಾಜು ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಿಶೇಷ ಸೂಚನೆ : 1) ಈಗಾಗಲೇ ಸರ್ವಸದಸ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದರೆ ಇದನ್ನೆ ಆಹ್ವಾನವೆಂದು ಭಾವಿಸಿ ಸಭೆಗೆ ಆಗಮಿಸಬೇಕಾಗಿ ವಿನಂತಿ. 2) ವಾರ್ಷಿಕ ಮಹಾಸಭೆ ಇರುವುದರಿಂದ ದಿನಾಂಕ05082023ರಂದು ಮುಖ್ಯ ಕಛೇರಿ ಹಾಗೂ ಶಾಖಾ ಕಛೇರಿಗಳಿಗೆ ರಜೆ ಘೋಷಿಸಲಾಗಿದೆ.